ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 | ಸಂಚಿಕೆ 31 | ಅಕ್ಟೋಬರ್ 7, 1979 | 40 ಪೈಸೆ

ಆರೆಸ್ಸೆಸ್‌ನವರ ಪೀಕಲಾಟ

ಸಂಪಾದಕೀಯ

ಜನತಾ ಸರಕಾರ ಉರುಳಿದ ನಂತರ ಆರ್.ಎಸ್.ಎಸ್.-ಜನಸಂಘದ ನಾಯಕರು ಕಂಗಾಲಾಗಿದ್ದಾರೆ. ಜನತಾ ಸರಕಾರವಿದ್ದಾಗ ಅದರ ಮರೆಯಲ್ಲಿ ಪಾರ್ಟಿಯ ಮೇಲೆ ತಮ್ಮ ಪ್ರಭಾವವನ್ನು ಬೀರಿ, ಪಕ್ಷವನ್ನು ಮತ್ತು ಕೇಂದ್ರ ಸರಕಾರವನ್ನು ತಮ್ಮ ಹಿಡಿತದಲ್ಲಿ ತರಲು ಅವರು ನಡೆಸಿದ ಪಿತೂರಿಯು ಈಗ ವಿಫಲಗೊಂಡಿದೆ. ದೇಶಾದ್ಯಂತ ಜನ ಈಗ ಎಚ್ಚೆತ್ತು ಆರ್.ಎಸ್.ಎಸ್.-ಜನಸಂಘದ ಅಪಾಯದ ಬಗ್ಗೆ ಜಾಗೃತರಾಗುತ್ತಿದ್ದಾರೆ. ಈ ಪರಿಸ್ಥಿತಿಯಲ್ಲಿ ತಮ್ಮ ಅಸ್ತಿತ್ವವನ್ನುಳಿಸಿಕೊಳ್ಳಲು ಮತ್ತು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ತಮಗೆ ಸಹಾಯಕವಾಗುವಂತೆ ಈಗ ರಾಷ್ಟ್ರಾದ್ಯಂತ ಮನೆಮನೆಗೆ ಹೋಗಿ ತನ್ನ ಧೋರಣೆಯನ್ನು ಪ್ರಚಾರ ಮಾಡುವ ಕಾರ್ಯಕ್ರಮವನ್ನು ಅವರು ಹಾಕಿಕೊಂಡಿದ್ದಾರೆ. ಈ ಕೆಲಸದಲ್ಲಿ ಎಲ್ಲಾ ಆರ್.ಎಸ್.ಎಸ್. ಕಾರ್ಯಕರ್ತರನ್ನು ಅಣಿಗೊಳಿಸಲಾಗಿದೆ.

ಒಂದು ದಿನ ಆರ್.ಎಸ್ ಎಸ್. ನಾಯಕ ಶ್ರೀ ಬಾಳಾಸಾಹೇಬ್ ದೇವರಸ್‌ರವರು ಇನ್ನು ಹತ್ತು ವರ್ಷಗಳಲ್ಲಿ ತಾವು ದೇಶದಲ್ಲಿ ಅಧಿಕಾರಕ್ಕೆ ಬರುತ್ತೇವೆಂದು ಹೇಳಿರುವರು. ಇದಕ್ಕೆ ಜನತೆಯ ಪ್ರತಿಕ್ರಿಯೆಯಿಂದ ಅವರು ಗಾಬರಿಗೊಂಡು ನಂತರ ತಮ್ಮ ಹೇಳಿಕೆಯನ್ನು ನಿರಾಕರಿಸಲು ಯತ್ನಿಸಿದರು.

ತಾವು ಪ್ರತಿಪಾದಿಸುವ "ಹಿಂದೂ ರಾಷ್ಟ್ರ" ವಿಚಾರವು "ಭಾರತ ರಾಷ್ಟ್ರ"ದಿಂದ ಭಿನ್ನವಾದುದಲ್ಲವೆಂದು ದೇವರಸ್ ಹೇಳುತ್ತಾ "ಹಿಂದೂ ರಾಷ್ಟ್ರ"ವು ಹಿಂದೂ ಸಂಸ್ಕೃತಿಯನ್ನು ಅವಲಂಭಿಸಿದೆ ಎಂದೂ ಮತ್ತು ಇತರ ಧರ್ಮದ ಮುಸಲ್ಮಾನರೂ, ಕ್ರಿಶ್ಚಿಯನ್ನರೂ, ಪಾರ್ಸಿಗಳೂ, ಮತ್ತಿತರರೂ ಒಪ್ಪಬೇಕೆಂದೂ ಹೇಳುತ್ತಾರೆ. ಇದರ ಅರ್ಥ ಸ್ಪಷ್ಟವಾಗಿದೆ. ಭಾರತದಲ್ಲಿ ವಾಸಮಾಡುವವರೆಲ್ಲರೂ ಹಿಂದೂಗಳೇ !

ಆರ್.ಎಸ್.ಎಸ್. ಸಂಸ್ಥೆಯು ಸಾಂಸ್ಕೃತಿಕ ಸಂಸ್ಥೆಯೆಂದೂ, ರಾಜಕೀಯಕ್ಕೆ ಸಂಬಂಧವಿಲ್ಲವೆಂದೂ ಹೇಳುತ್ತಾ ಆರ್.ಎಸ್.ಎಸ್. ಸದಸ್ಯರು "ಹಿಂಸೆಯ ಧ್ಯೇಯ"ವಿರುವ ಪಕ್ಷಗಳನ್ನು ಹೊರತು ಇತರ ಯಾವ ರಾಜಕೀಯ ಪಕ್ಷವನ್ನಾದರೂ ಸೇರಬಹುದೆಂದು ಸಹ ದೇವರಸ್‌ರವರು ಹೇಳುತ್ತಾರೆ.

ತುರ್ತುಪರಿಸ್ಥಿತಿಯ ಕಾಲದಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ನಡೆಸಿದ ಅತ್ಯಾಚಾರಗಳನ್ನೆಲ್ಲಾ ಕ್ಷಮಿಸಬೇಕೆಂದೂ, ಅವುಗಳ ವಿಚಾರಣೆಗೆ ರಚಿಸಲ್ಪಟ್ಟ ಎಲ್ಲ ಕಮಿಷನ್‌ಗಳನ್ನೂ, ವಿಶೇಷ ನ್ಯಾಯಾಲಯಗಳನ್ನೂ

[ಕಡೆಯ ಪುಟ ನೋಡಿ]

ಜಾತೀಯವಾದಿ ಹಾಗೂ ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ರಾಜ್ಯದಲ್ಲಿ ರಾಜಕೀಯ ಸಮಾವೇಶ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿ ಕಾರ್ಯದರ್ಶಿ ಕಾಂ. ಎಂ.ಕೆ. ಭಟ್ ಹಾಗೂ ಭಾರತೀಯ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕೌನ್ಸಿಲ್ ಕಾರ್ಯದರ್ಶಿ ಕಾಂ.ಎಂ.ಎಸ್. ಕೃಷ್ಣನ್‌ರವರು ಜಂಟೀ ಹೇಳಿಕೆಯೊಂದನ್ನು ನೀಡಿ ಲೋಕಸಭೆಗೆ ಮಧ್ಯಕಾಲೀನ ಚುನಾವಣೆ ನಡೆಸುವ ಘೋಷಣೆಯಿಂದಾಗಿ ರಾಜಕೀಯ ಶಕ್ತಿಗಳ ಪುನರ್ ಹೊಂದಾಣಿಕೆ ಪ್ರಾರಂಭವಾಗಿರುವುದನ್ನು ಗುರುತಿಸಿದ್ದಾರೆ. ಒಂದು ಕಡೆ ಇಂದಿರಾಕಾಂಗ್ರೆಸ್ ನೇತೃತ್ವದಲ್ಲಿ ಸರ್ವಾಧಿಕಾರಿ ಶಕ್ತಿಗಳು ಅಧಿಕಾರ ಕಬಳಿಸಲು ಸರ್ವ ಪ್ರಯತ್ನಗಳನ್ನು ಮಾಡುತ್ತಿವೆ. ಮತ್ತೊಂದೆಡೆ ಜನಸಂಘ-ಆರ್.ಎಸ್.ಎಸ್. ನಿಯಂತ್ರಿತ ಜನತಾಪಕ್ಷ ಕೂಡಾ ಪ್ರಯತ್ನಿಸುತ್ತಿದೆ. ಈ ಎರಡೂ ಪಕ್ಷಗಳು ಜನತೆಯ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಂಪೂರ್ಣ ವಿಫಲವಾಗಿರುವುದಲ್ಲದೆ, ದೇಶವನ್ನು ಬಂಡವಾಳಶಾಹಿ ಪಥದತ್ತ ಒಯ್ಯುತ್ತಿರುವುದನ್ನು ಗಮನಿಸಿರುವ ಸಿ.ಪಿ.ಐ. ಮತ್ತು ಸಿ.ಪಿ.ಐ.(ಎಂ.) ಪಕ್ಷಗಳು ಬರಲಿರುವ ಚುನಾವಣೆಯಲ್ಲಿ ಮೇಲಿನ ಎರಡೂ ಪಕ್ಷಗಳನ್ನು ಪರಾಭವಗೊಳಿಸಿ, ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಬಲಗೊಳಿಸುವುದರ ಮೂಲಕ ದೇಶದ ಮೂಲಭೂತ ಸಮಸ್ಯೆಗಳಿಗೆ ಹೊಸ ದೃಷ್ಟಿಕೋನ ನೀಡುವುದಕ್ಕೆ ಸಾಧ್ಯವಾಗುತ್ತದೆಂಬುದನ್ನು ಗಮನಿಸಿವೆ.

ಎಡ ಪಕ್ಷಗಳ ಬೆಂಬಲದಿಂದ ಅಧಿಕಾರಕ್ಕೆ ಬಂದಿರುವ ಹೊಸ ಕೇಂದ್ರ ಸರಕಾರ, ರಾಜಕೀಯ ಮರುಹೊಂದಾಣಿಕೆಯ ಒಂದು ಹೆಜ್ಜೆಯಾಗಿದೆ. ಇದನ್ನು ಗಮನಿಸಿರುವ ರಾಜ್ಯದ ಸಿ. ಪಿ. ಐ. ಮತ್ತು ಸಿ.ಪಿ.ಐ.(ಎಂ.) ರಾಜ್ಯಶಾಖೆಗಳು ರಾಜ್ಯದ ಜನತೆಯನ್ನು ಜಾತೀಯವಾದ ಮತ್ತು ಸರ್ವಾಧಿಕಾರದ ವಿರುದ್ಧ ಎಚ್ಚರಿಸಿ, ಜಾಗೃತಿಯನ್ನು ಮೂಡಿಸಲು ನಿರ್ಧರಿಸಿವೆ.

ಆದ್ದರಿಂದ ಶೀಘ್ರದಲ್ಲಿಯೇ ರಾಜ್ಯಮಟ್ಟದ ಜಾತೀಯವಾದಿ - ಸರ್ವಾಧಿಕಾರಿ ವಿರೋಧಿ ಸಮಾವೇಶವನ್ನು ಅರಸು ಕಾಂಗ್ರೆಸ್, ರಿಪಬ್ಲಿಕನ್ ಪಾರ್ಟಿ (ಗವಾಯಿ) ಮತ್ತಿತರ ಸಮಾನ ಮನೋಧರ್ಮದ ಪಕ್ಷಗಳ ಸಹಕಾರದೊಡನೆ ರಾಜ್ಯಮಟ್ಟದಲ್ಲಿ ಮತ್ತು ಜಿಲ್ಲೆಗಳ ಮಟ್ಟದಲ್ಲಿ ಸಂಘಟಿಸಲಾಗುವುದು.

ಸಮಾವೇಶದ ಯಶಸ್ಸಿಗೆ ಎಲ್ಲಾ ಸಮಾನ ಮನಸ್ಸಿನ ಪಕ್ಷಗಳು, ಸಂಸ್ಥೆಗಳು ಹಾಗೂ ವ್ಯಕ್ತಿಗಳು ಸಹಕರಿಸಿ ಯಶಸ್ವಿಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ. ●

ಆರ್. ಎಸ್. ಎಸ್. ನಿಯಂತ್ರಿತ ಜನತಾ ಪಕ್ಷವನ್ನು ತೊರೆಯಲು ಸಮಾಜವಾದಿಗಳಿಗೆ ಪೊಲಿಟ್‌ಬ್ಯೂರೋ ಕರೆ

ಮೊದಲೇ ಕಷ್ಟಕ್ಕೆ ಗುರಿಯಾಗಿರುವ ಜನಸಾಮಾನ್ಯರು ಇತ್ತೀಚಿನ ಬೆಲೆ ಏರಿಕೆಯಿಂದಾಗಿ ತುಂಬಾ ತೊಂದರೆಗೆ ಒಳಗಾಗಿದ್ದಾರೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋ ತನ್ನ ಕಳವಳ ವ್ಯಕ್ತಪಡಿಸಿದೆ. ಅಕ್ಟೋಬರ್ 1 ಮತ್ತು 2 ರಂದು ನವದೆಹಲಿಯಲ್ಲಿ ಸಭೆಸೇರಿದ್ದ ಪೊಲಿಟ್‌ಬ್ಯೂರೋ ಪ್ರಸಕ್ತ ರಾಜಕೀಯ ಹಾಗೂ ಆರ್ಥಿಕ ಪರಿಸ್ಥಿತಿಯ ಬಗ್ಗೆ ವಿಮರ್ಶೆ ನಡೆಸಿತು. ಜನಸಾಮಾನ್ಯರು ಹಾಗೂ ಕೃಷಿಕೂಲಿಗಾರರು ಈ ಬೆಲೆ ಏರಿಕೆಯ ಬಿಸಿಯಲ್ಲಿ ಬೆಂದುಹೋಗುತ್ತಿದ್ದಾರೆ. ಒಡೆಯುತ್ತಿರುವ ದಲ್ಲಾಳಿಗಳು ರೈತರನ್ನು ಹಾಗೂ ಜನತೆಯನ್ನು ಸುಲಿಗೆ ಮಾಡುತ್ತಿದ್ದಾರೆ. ಆದ್ದರಿಂದ ಆರ್ಥಿಕ ಅಪರಾಧಿಗಳ ವಿರುದ್ಧ ಉಗ್ರಕ್ರಮಗಳನ್ನು ಕೈಗೊಳ್ಳಬೇಕೆಂದು ಪೊಲಿಟ್‌ಬ್ಯೂರೋ ಅಭಿಪ್ರಾಯಪಟ್ಟಿದೆ.

ಆದರೆ, ಉಗ್ರಕ್ರಮದ ಅರ್ಥ, ವಿಚಾರಣೆಯಿಲ್ಲದೆ ಜನರನ್ನು ಬಂಧಿಸುವುದು ಎಂದಲ್ಲ. ಕೇಂದ್ರ ಸರಕಾರ ಉದ್ದೇಶಿಸಿರುವ ಮೀಸಾ ಕಾನೂನಿನ ಬದಲಿಗೆ ಈಗಿರುವ ಕಾನೂನಿನ ಲೋಪದೋಷಗಳನ್ನು ಸರಿಪಡಿಸಿ, ಸಾಧ್ಯವಾದರೆ ವಿಶೇಷ ಕೋರ್ಟುಗಳನ್ನು ಸ್ಥಾಪಿಸಿ, ಅಪರಾಧಿಯನ್ನು ಕಟಕಟೆಯಲ್ಲಿ ನಿಲ್ಲಿಸಬೇಕು. ಈ ಹಿಂದೆ ಮೀಸಾ ಕಾನೂನನ್ನು ಇಂದಿರಾಗಾಂಧಿಯವರು ದುರುಪಯೋಗಪಡಿಸಿದಂತೆ, ಈಗಲೂ ದುರುಪಯೋಗದ ಸಾಧ್ಯತೆಗಳಿರುವುದರಿಂದ, ಆರ್ಥಿಕ ಅಪರಾಧಿಗಳನ್ನು ಶಿಕ್ಷಿಸಲು ಮೀಸಾ ಉಪಯೋಗಿಸುವುದನ್ನು ಪೊಲಿಟ್‌ಬ್ಯೂರೋ ವಿರೋಧಿಸಿದೆ.

ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಒಂದಾಗಿ ಜಾತೀಯವಾದಿ ಹಾಗೂ ಸರ್ವಾಧಿಕಾರಿ ಶಕ್ತಿಗಳನ್ನು ಎದುರಿಸಲು ಒಂದಾಗುತ್ತಿರುವುದು ಸಂತೋಷಕರ ವಿಷಯ. ಆದರೆ, ಐಕ್ಯ ವೇದಿಕೆಯ ರಚನೆಯಲ್ಲಿ ಆಗುತ್ತಿರುವ ಅನೇಕ ಅಡಚಣೆಗಳ ಬಗ್ಗೆ ಪಿ.ಬಿ. ಆತಂಕ ವ್ಯಕ್ತಪಡಿಸಿದೆ.

ಗುತ್ತೇದಾರಿ ಪತ್ರಿಕೆಗಳು ಇಂದಿರಾ ಕಾಂಗ್ರೆಸ್ ಮಾತ್ರ ಜನತಾಪಕ್ಷ ಹಾಗೂ ಈಗಿರುವ ಸರ್ಕಾರಕ್ಕೆ ಪ್ರತಿಯಾಗಿ ಸರ್ಕಾರ ರಚಿಸಲು ಸಾಧ್ಯವಿರುವ ಪಕ್ಷವೆಂದು ಮಾಡುತ್ತಿರುವ ಪ್ರಚಾರವನ್ನು ಪಿ. ಬಿ. ಗಮನಿಸಿದೆ. ಪತ್ರಿಕಾ ಪ್ರಚಾರದ ಪೂರ್ಣ ಪ್ರಯೋಜನ ಪಡೆದು ಇಂದಿರಾಕಾಂಗ್ರೆಸ್ಸಿನವರು ತಾವೇ ಭಾವೀ ಸರ್ಕಾರದ ಸೂತ್ರದಾರರು ಎಂಬಂತೆ ವರ್ತಿಸುತ್ತಾ ಪಕ್ಷಾಂತರಕ್ಕೆ ಪ್ರೋತ್ಸಾಹ ನೀಡುತ್ತಿದ್ದಾರೆ. ಆದ್ದರಿಂದ ಎಲ್ಲಾ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಒಂದಾಗಿ ಇಂದಿರಾಕಾಂಗ್ರೆಸ್ ಹಾಗೂ ಆರೆಸ್ಸೆಸ್ ನಿಯಂತ್ರಿತ ಜನತಾಪಕ್ಷಗಳ ಪರಾಭವಕ್ಕೆ ಶ್ರಮಿಸಬೇಕಾಗಿದೆ.

ಆರೆಸ್ಸೆಸ್‌ನ ನಿಜವಾದ ಉದ್ದೇಶವೇನೆಂಬುದನ್ನು ಬಾಳಾಸಾಹೇಬ್ ದೇವರಸರು ಸ್ಪಷ್ಟವಾಗಿ ಹೇಳಿದ್ದರು. ಅನೇಕ ಸಮಾಜವಾದಿಗಳು ಇನ್ನೂ ಜನತಾಪಕ್ಷದಲ್ಲಿಯೇ ಉಳಿದಿರುವುದು ಖೇದಕರ. ಪೊಲಿಟ್‌ಬ್ಯೂರೋ ಮತ್ತೊಮ್ಮೆ ಈ ಸಮಾಜವಾದಿಮುಖಂಡರಲ್ಲಿ ಮನವಿ ಮಾಡುವುದೇನೆಂದರೇ, ಕೂಡಲೇ ಆರೆಸ್ಸೆಸ್‌ನಿಯಂತ್ರಿತ ಜನತಾ ಪಕ್ಷವನ್ನು ತೊರೆದು, ಎಡ, ಪ್ರಜಾಸತ್ತಾತ್ಮಕ ಹಾಗೂ ಜಾತ್ಯಾತೀತ ಶಕ್ತಿಗಳನ್ನು ಸೇರುವುದರ ಮೂಲಕ ದೇಶದಲ್ಲಿ ಸರ್ವಾಧಿಕಾರಿಹಾಗೂ ಜಾತೀಯವಾದವನ್ನು ನಿರ್ಮೂಲನಗೊಳಿಸುವಲ್ಲಿ ಸಹಕರಿಸಬೇಕು. ಇದು ದೇಶದ ಇಂದಿನ ಅವಶ್ಯಕತೆ.

ತಮಿಳುನಾಡಿನಲ್ಲಿ ಡಿ. ಎಂ. ಕೆ. ಪಕ್ಷ ಇಂದಿರಾಕಾಂಗ್ರೆಸ್‌ನೊಂದಿಗೆ ಹಾಗೂ ಅಣ್ಣಾ ಡಿ. ಎಂ. ಕೆ. ಪಕ್ಷ ಜನತಾಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡಿರುವುದರಿಂದ, ಮಾರ್ಕ್ಸ್‌ವಾದಿ

[ಕಡೆಯ ಪುಟ ನೋಡಿ]

ತಾತಗುಣಿ ಕಾರ್ಮಿಕರಿಗೆ ನ್ಯಾಯ ದೊರೆಯದಿದ್ದರೆ ಮುಖ್ಯ ಮಂತ್ರಿ ನಿವಾಸದ ಮುಂದೆ ನಿರಶನ

ಬೆಂಗಳೂರು ದಕ್ಷಿಣ ತಾಲ್ಲೂಕಿನ ಕನಕಪುರ ರಸ್ತೆಯಲ್ಲಿರುವ ತಾತಗುಣಿ ಎಸ್ಟೇಟಿನ ಮಾಲೀಕರ ಕಾರ್ಮಿಕ ವಿರೋಧಿ ನೀತಿಗಳನ್ನು ವಿರೋಧಿಸಿ ಬೆಂಗಳೂರು ಜಿಲ್ಲಾ ರೈತಸಂಘವು ಅ. 4ರಂದು ಬೆಂಗಳೂರು ಜಿಲ್ಲಾಧಿಕಾರಿ ಕಚೇರಿ ಮುಂದೆ ಒಂದು ದಿವಸದ ಧರಣಿ ಸತ್ಯಾಗ್ರಹ ನಡೆಸಿತು.

ಪ್ರಾಂತ ರೈತಸಂಘದ ಅಧ್ಯಕ್ಷ ಕಾಂ. ಎಚ್. ಮುಗುವಾಳಪ್ಪನವರ ನೇತೃತ್ವದಲ್ಲಿ ರೈತಸಂಘದ 30 ಸದಸ್ಯರು ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಸತ್ಯಾಗ್ರಹದಲ್ಲಿ 10ಜನ ಮಹಿಳೆಯರೂ ಪಾಲ್ಗೊಂಡಿದ್ದರು.

ಕನಿಷ್ಟ ವೇತನವನ್ನು ಜಾರಿ ಮಾಡಿ ಎಂದು ಎಸ್ಟೇಟಿನ ಕಾರ್ಮಿಕರು ಸಂಘಟಿತರಾಗಿ ಕೇಳಿದಾಗ ಮಾಲೀಕರು 12 ಜನ ಹರಿಜನ ಕಾರ್ಮಿಕರನ್ನು ಕೆಲಸದಿಂದ ಕಿತ್ತು ಹಾಕಿದ್ದಾರೆಂದೂ ಅವರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಲು ಮತ್ತು 5-60ಪೈಸೆಯ ಕನಿಷ್ಟಕೂಲಿಯ ಈಡೇರಿಕೆಗಾಗಿ ಈ ಸತ್ಯಾಗ್ರಹ ನಡೆಯುತ್ತಿದೆ ಎಂದು ಬೆಂಗಳೂರು ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಪಿ. ಜಗನ್ನಾಥ್ ತಿಳಿಸಿದರು.

ತುರ್ತುಪರಿಸ್ಥಿತಿಯ ಸಮಯದಿಂದಲೂ ಈ ಬಡಹರಿಜನ ಕಾರ್ಮಿಕರ ಹೋರಾಟ ನಡೆಯುತ್ತಿದೆ ಎಂತಲೂ, ಹರಿಜನ ಕೂಲಿಗಾರರ ಬೇಡಿಕೆಗಳು ಈಡೇರುವವರೆಗೆ ಮತ್ತು ಎಸ್ಟೇಟಿನ ಆಡಳಿತ ವರ್ಗ ಕನಿಷ್ಟ ಕೂಲಿಯನ್ನು ಜಾರಿಗೆ ತರುವವರೆಗೆ ಕಾರ್ಮಿಕರ ಹೋರಾಟ ನಿಲ್ಲದು ಎಂದೂ ಸಹ ಕಾಂ. ಜಗನ್ನಾಥ್ ಹೇಳಿದರು.

ಎಸ್ಟೇಟ್ ಕಾರ್ಮಿಕರು 24-7-79 ರಿಂದ ಮುಷ್ಕರ ಹೂಡಿದ್ದಾರೆ ಮತ್ತು ಕಾರ್ಮಿಕ ಹೋರಾಟವನ್ನು ಮುರಿಯಲು ಮಾಲೀಕರು ಹೊರಗಡೆಯಿಂದ ಕೆಲಸಗಾರರನ್ನು ತಂದು ದುಡಿಸಿಕೊಳ್ಳುತ್ತಿದ್ದಾರೆ ಎಂದು ಹೇಳಿರುವ ರೈತ ನಾಯಕರು ಸರ್ಕಾರವು ಮಧ್ಯಪ್ರವೇಶ ಮಾಡಿ ಬಡ ಹರಿಜನ ಕಾರ್ಮಿಕರ ನ್ಯಾಯಬದ್ಧ ಬೇಡಿಕೆಗಳನ್ನು ಈಡೇರಿಸದಿದ್ದರೆ ರಾಜ್ಯದ ಮುಖ್ಯಮಂತ್ರಿಗಳ ಮನೆಯ ಮುಂದೆ ಸತ್ಯಾಗ್ರಹ ಹೂಡುವುದಾಗಿ ಬೆದರಿಕೆ ಹಾಕಿದ್ದಾರೆ. ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ ಹೋಬಳಿಗೆ ಸೇರಿದ ಚೆನ್ನವೀರಯ್ಯನ ಪಾಳ್ಯದ ಗೇಣಿದಾರ ಬಸವಲಿಂಗಪ್ಪ 6-8-79ರಿಂದ ನಾಪತ್ತೆಯಾಗಿದ್ದಾರೆ. ಇವರ ಪತ್ತೆಗಾಗಿ ಬಸವಲಿಂಗಪ್ಪನವರ ಪತ್ನಿ ಸಂಬಂಧಪಟ್ಟ ಪೋಲೀಸಿನವರಿಗೆ ದೂರುಕೊಟ್ಟಿದ್ದರೂ ಇನ್ನೂ ಪತ್ತೆಯಾಗಿಲ್ಲದ ಕಾರಣ ನಾಪತ್ತೆಯಾಗಿರುವ ಗೇಣಿದಾರನ ಪತ್ತೆಯನ್ನು ಒತ್ತಾಯಿಸಿ ಸಹ ರೈತಸಂಘ ಸತ್ಯಾಗ್ರಹ ನಡೆಸಿತು.

●

ಕಡಂಬಾರಿನಲ್ಲಿ ಮಾರ್ಕ್ಸಿಸ್ಟ್ ಪಕ್ಷದ ಸಭೆ

ಕಾಸರಗೋಡು ತಾಲ್ಲೂಕು ಮಿಂಜ ಪಂಚಾಯತ್‌ನ ಕಡಂಬಾರಿನಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸಭೆಯು ತಾ॥ 30-9-79 ರಂದು ಕಾಮ್ರೇಡ್ ಅಬೂಬಕ್ಕರ್ ಸಾಹೇಬರವರ ಅಧ್ಯಕ್ಷತೆಯಲ್ಲಿ ಜರುಗಿತು. ಕಾಂ. ಬಿ. ಎಂ. ಮಾಧವನವರು ದೇಶದ ಇಂದಿನ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಯನ್ನು ಸಾಧಿಸಲು ಮಾರ್ಕ್ಸಿಸ್ಟ್ ಪಕ್ಷವು 1967 ರಿಂದಲೇ ನಡೆಸಿದ ಪ್ರಯತ್ನ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸರ್ವಾಧಿಕಾರಿ ಮತ್ತು ಕೋಮುವಾದಿ ಶಕ್ತಿಗಳನ್ನು ಸೋಲಿಸಲು ಪಕ್ಷವು ರೂಪೀಕರಿಸಿದ ಸ್ಪಷ್ಟ ಚುನಾವಣಾ ತಂತ್ರವನ್ನು ತಿಳಿಸಿದರು. ಪಂಚಾಯತ್ ಚುನಾವಣೆಯ ಫಲಿತಾಂಶದ ಹಿನ್ನೆಲೆಯಲ್ಲಿ ಕೇರಳದ ವಿಧಾನ ಸಭೆಯನ್ನು ವಿಸರ್ಜಿಸಿ ಲೋಕಸಭಾ ಚುನಾವಣೆಯೊಂದಿಗೆ ಕೇರಳ ವಿಧಾನಸಭೆಗೂ ಚುನಾವಣೆ ನಡೆಸುವುದರಿಂದ ಮಾತ್ರ ಜನಾಭಿಪ್ರಾಯಕ್ಕೆ ಮನ್ನಣೆಯಿತ್ತಂತಾಗುವುದೆಂದು ಕಾಂ. ಕೆ. ರಾಮಚಂದ್ರನವರು ಹೇಳಿದರು. ಪ್ರತಿಯೊಂದು ಗ್ರಾಮದಲ್ಲೂ ರೈತಸಂಘಟನೆ, ಕಾರ್ಮಿಕ ಸಂಘಟನೆ ಹಾಗೂ ಯುವಜನ ಸಂಘಟನೆಗಳು ಬೆಳೆದುಬಂದರೆ ಮಾತ್ರ ಪಕ್ಷದ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಲು ಸಾಧ್ಯವೆಂದು ಕಾಂ. ನಾರಾಯಣ ಅಮೀನರು ತಿಳಿಸಿದರು. ದೇಶದಲ್ಲಿ ಪ್ರಜಾಪ್ರಭುತ್ವವನ್ನು ಶಾಶ್ವತವಾಗಿ ನೆಲೆಗೊಳ್ಳುವಂತೆ ಮಾಡಲು ಸರ್ವಾಧಿಕಾರಿ ಹಾಗೂ ಕೋಮುವಾದಿ ಶಕ್ತಿಗಳನ್ನು ಸಂಪೂರ್ಣವಾಗಿ ಸೋಲಿಸುವುದು ಹಾಗೂ ಮಾರ್ಕ್ಸಿಸ್ಟ್ ಪಕ್ಷದ ನೇತೃತ್ವದಲ್ಲಿ ಎಲ್ಲಾ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಒಂದುಗೂಡಿಸುವುದು ಅತೀ ಅಗತ್ಯವೆಂದು ಸಭಾಧ್ಯಕ್ಷರು ಒತ್ತಿ ಹೇಳಿದರು. ರೈತಸಂಘಕ್ಕೆ ಸದಸ್ಯರನ್ನು ಸೇರಿಸಲು ತೀರ್ಮಾನಿಸಲಾಯಿತು. ○

ಕಾವೂರು ವ್ಯವಸಾಯ ಸೇವಾ ಸಹಕಾರ ಸಂಘದ ಅಧ್ಯಕ್ಷರಾಗಿ ಕಾಂ. ಕೆ.ಆರ್. ಶ್ರೀಯಾನ್‌ರ ಆಯ್ಕೆ

ಕಾವೂರು ವ್ಯವಸಾಯ ಸೇವಾ ಸಹಕಾರ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಆರಿಸಲ್ಪಟ್ಟ ಒಂಭತ್ತು ಜನ ಡೈರೆಕ್ಟರುಗಳ ಸಭೆಯು ತಾ. 4-10-79ರಂದು ನಡೆಯಿತು. ಸಭೆಯಲ್ಲಿ ಕಾಂ. ಶ್ರೀಯಾನರನ್ನು ಸಂಘದ ಅಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು. ○

ಬಹುರಾಷ್ಟ್ರೀಯ ಕಂಪೆನಿಯ ವಿರುದ್ಧ ಹೋರಾಟ

ಮೈಕೋ ಕಾರ್ಮಿಕರ ಮುಷ್ಕರ

ಬೆಂಗಳೂರು ನಗರದಲ್ಲಿರುವ ಪಶ್ಚಿಮ ಜರ್ಮನಿಯ ಬಹುರಾಷ್ಟ್ರೀಯ ಕಂಪೆನಿಯ ಮೈಕೋ ಕಾರಖಾನೆಯ ಕಾರ್ಮಿಕರು ಅನಿರ್ಧಿಷ್ಟಕಾಲದ ಮುಷ್ಕರದಲ್ಲಿ ತೊಡಗಿದ್ದಾರೆ. ನ್ಯಾಯವಾದ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಬದಲಾಗಿ ಕಾರ್ಮಿಕರ ಐಕ್ಯತೆ ಮತ್ತು ಸಂಘಟನೆಯನ್ನು ಹತ್ತಿಕ್ಕಲು ಹೊರಟ ಮ್ಯಾನೇಜುಮೆಂಟಿನ ಕಾರ್ಮಿಕ ವಿರೋಧಿ ಕ್ರಮಗಳನ್ನು ವಿರೋಧಿಸಿ ಸುಮಾರು ಏಳು ಸಹಸ್ರ ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿರುವರು.

ಅಮಾನತ್ತುಗೊಳಿಸಿದ 26 ಕಾರ್ಮಿಕರ ಮೇಲಿನ ಅಮಾನತ್ತು ನೋಟೀಸುಗಳನ್ನು ಹಿಂತೆಗೆದುಕೊಳ್ಳಬೇಕೆಂದೂ, ಅನೇಕ ಕಾರ್ಮಿಕರ ಮೇಲೆ ಕೊಟ್ಟಿರುವ ಶೋಕಾಸ್ ನೋಟೀಸುಗಳನ್ನು ಹಿಂತೆಗೆದುಕೊಳ್ಳಬೇಕೆಂಬುದೂ ಒಂದು ಮುಖ್ಯ ಬೇಡಿಕೆಯಾಗಿದೆ. ಬೇರಲ್ ಗ್ರೈಂಡಿಗ್ ವಿಭಾಗದಲ್ಲಿ ಒಬ್ಬ ಕಾರ್ಮಿಕ ಎರಡು ಮೆಷೀನ್‌ಗಳನ್ನು ನಡೆಸುವುದರಿಂದ ಈಗಾಗಲೇ ಎಂಟು ಕಾರ್ಮಿಕರ ಕಾಲುಗಳಿಗೆ ಜಖಂ ಆಗಿದೆ. ಈ ರೀತಿ ಅಕ್ರಮವಾಗಿ ಹೇರಿದ ಕೆಲಸದ ಭಾರ (ವರ್ಕ್ ಲೋಡ್)ವನ್ನು ಇಳಿಸಬೇಕೆಂಬುದು ಇನ್ನೊಂದು ಮುಖ್ಯ ಬೇಡಿಕೆಯಾಗಿದೆ. ಕಾರ್ಮಿಕರನ್ನು ಶೋಷಣೆ ಮಾಡುವುದು ಮಾತ್ರವಲ್ಲದೆ, ಕೋಟಿಗಟ್ಟಲೆ ರೂಪಾಯಿಗಳನ್ನು ನಮ್ಮ ದೇಶದಿಂದ ಕೊಳ್ಳೆಹೊಡೆಯುವ ಈ ಕಂಪೆನಿಯ ಮಾಲಕರು ಕಾರ್ಮಿಕರ ಹೋರಾಟವನ್ನು ಹತ್ತಿಕ್ಕಲು ಪ್ರಯತ್ನಿಸುತ್ತಲಿದ್ದಾರೆ. ಗೂಂಡಾಗಳನ್ನು ಕಳುಹಿಸಿ ಕಾರ್ಮಿಕರ ಮುಂದಾಳುಗಳನ್ನು ಬೆದರಿಸುತ್ತಲಿದ್ದಾರೆ. ಸಿ.ಐ.ಟಿ.ಯು. ರಾಜ್ಯಸಮಿತಿ ಅಧ್ಯಕ್ಷ ಕಾಂ. ಸೂರ್ಯನಾರಾಯಣ ರಾವ್ ಅವರು ಮೈಕೋ ಕಾರ್ಮಿಕರ ಸಂಘಕ್ಕೆ ಅಧ್ಯಕ್ಷರಾಗಿದ್ದು, ಕಾರ್ಮಿಕರು ಎಂದೆಂದೂ ಕಂಡುಬಾರದ ಸ್ಫೂರ್ತಿ ಮತ್ತು ಒಗ್ಗಟ್ಟಿನಿಂದ ಹೋರಾಡಲು ಸಿದ್ಧರಾಗಿರುವುದನ್ನು ತಿಳಿದೆ ಮಾಲಕರು ಎಂತಾದರೂ ಸಂಘವನ್ನು ಹತ್ತಿಕ್ಕಲು ಯೋಜನೆ ಹಾಕಿದ್ದಾರೆ.

ಶಾಂತಯುತವಾಗಿ ಮುಷ್ಕರ ನಡೆಯುತ್ತಲಿದ್ದರೂ, ಏಳನೇ ತಾರೀಕಿನಿಂದ ಪೋಲೀಸರು ಕಾರಖಾನೆಯ ಆವರಣದಲ್ಲಿ (ಎರಡು ಕಿಲೋಮೀಟರು ದೂರ) 35ನೇ ಸೆಕ್ಷನ್ ಪ್ರತಿಬಂಧಕಾಜ್ಞೆ ಹೇರಿರುವರು. ಆದರೂ ಕಾರ್ಮಿಕರು ಸಹಸ್ರಾರು ಸಂಖ್ಯೆಯಲ್ಲಿ ಬೇರೆ ಬೇರೆಡೆ ಸೇರುತ್ತಲಿದ್ದು ಸಭೆ ನಡೆಸಿ, ಸಾರ್ವಜನಿಕರಬೆಂಬಲ ಪಡೆದು, ಹೋರಾಟವನ್ನು ಮುಂದುವರಿಸುವ ದೃಢ ನಿರ್ಧಾರವನ್ನು ತೆಗೆದುಕೊಂಡಿರುವರು.

ಬಹುರಾಷ್ಟ್ರೀಯ ಕಂಪೆನಿಯು ನಡೆಸುವ ಕೊಳ್ಳೆಯ ವಿರುದ್ಧ, ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಹೋರಾಟ ನಡೆಸುವುದು ಕೇವಲ ಮೈಕೋಕಾರ್ಮಿಕರ ಹಿತಕ್ಕಾಗಿ ಮಾತ್ರವಲ್ಲ, ದೇಶದ ಹಿತಕ್ಕಾಗಿಯೂ ಆಗಿದೆ. ಆದುದರಿಂದಲೇ ಈ ಹೋರಾಟಕ್ಕೆ ರಾಜ್ಯದಾದ್ಯಂತ ಬೆಂಬಲ ವೀಯುವುದು ಎಲ್ಲಾ ಕಾರ್ಮಿಕ ಸಂಘಟನೆಗಳ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಕರ್ತವ್ಯವಾಗಿದೆ. ●

ಆಟೋ ಚಾಲಕರ ಬೇಡಿಕೆ ಈಡೇರಿಕೆ

ಸುಮಾರು ನಾಲ್ಕು ವರ್ಷಗಳಿಂದ ಬೆಂಗಳೂರಿನ ಆಟೋಚಾಲಕರು ಕೆಂಪು ಬಾವುಟದಡಿಯಲ್ಲಿ ಸಂಘ ಸ್ಥಾಪಿಸಿಕೊಂಡು ಹಲವು ಹೋರಾಟಗಳಿಗೆ ಸಮರ್ಥ ನಾಯಕತ್ವ ನೀಡಿದ್ದಾರೆ.

ಕಳೆದ ನಾಲ್ಕು ವರುಷಗಳ ಅವಧಿಯಲ್ಲಿ ಕೆಲವು ಪ್ರತಿಗಾಮಿ ಶಕ್ತಿಗಳು ತಾವೇ ಪ್ರತ್ಯೇಕ ಸಂಘ ಸ್ಥಾಪಿಸಿಕೊಂಡು ತಮ್ಮ ವೈಯಕ್ತಿಕ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳಲು ಸಂಘದ ಕಾರ್ಯಕರ್ತರುಗಳ ಮೇಲೆ ಹಲವು ವಿಧ್ವಂಸಕ ಕೃತ್ಯಗಳನ್ನು ನಡೆಸಿದರೂ ಪ್ರಸ್ತುತ ಈ ಪ್ರತಿಗಾಮಿ ಶಕ್ತಿಗಳು ಮೂಲೆಗುಂಪಾಗಿವೆ.

ಚಾಲಕರು ಕೆಂಪುಬಾವುಟದ ಸಂಘವೇ ನಿಸ್ವಾರ್ಥ ಹಾಗೂ ಸಮರ್ಥವಾಗಿರುವುದೆಂದು ಮನಗಾಣುತ್ತಿದ್ದಾರೆ. ಪೋಲೀಸರ ಜೊತೆ ಸಾಮೀಲಾಗಿರುವ ಈ ಪ್ರತಿಗಾಮಿ ಶಕ್ತಿಗಳ ನಿಜ ಬಣ್ಣ ಈಗ ಬಟ್ಟಂಬಯಲಾಗಿ ಚಾಲಕರು ಅವರನ್ನು ತಿರಸ್ಕರಿಸುತ್ತಿದ್ದಾರೆ.

ಹೊಸ ಕಾರ್ಯಕಾರಿ ಸಮಿತಿಯನ್ನು ರಚಿಸಿ ಕೆಲವು ಪ್ರತಿಗಾಮಿ ಏಜೆಂಟರುಗಳನ್ನು ಬಡಿದೋಡಿಸಿ ಇತ್ತೀಚೆಗೆ ನಡೆದ ಕೆಲವು ಚಳುವಳಿಗಳು ಸಂಘಟಿತವಾಗಿ ನಡೆದಿವೆ.

ಪೆಟ್ರೋಲ್ ಬೆಲೆಏರಿಕೆಯ ಮೇಲಿಗೆ ಕನಿಷ್ಠ ಒಂದು ರೂ. ಕಿ. ಮಿ. 60 ಪೈಸೆ ನಿಗದಿಯಾಗಬೇಕೆಂಬ ಬೇಡಿಕೆಯನ್ನಿಟ್ಟು 1-9-79 ರಂದು ಯಶಸ್ವೀ ಮುಷ್ಕರವನ್ನು ನಡೆಸಲಾಯಿತು. ಕೆಲವು ಚಾಲಕರಿಗೆ ಲಾಠಿ ಏಟುಗಳು ಬಿದ್ದುವು ಕೆಲವು ಚಾಲಕರನ್ನು ಬಂಧಿಸಲಾಯಿತಾದರೂ, ಕೆಂಪು ಬಾವುಟದ ನೇತೃತ್ವದ ಚಾಲಕರ ಮೇಲಿನ ಬೇಡಿಕೆಯನ್ನು ಸರ್ಕಾರ ಒಪ್ಪಿಕೊಂಡು ಈಡೇರಿಸಿದೆ. ○

ಆವರಿ ಕಾರ್ಮಿಕರ ಅನಿರ್ಧಿಷ್ಟ ಮುಷ್ಕರ

ಆವರಿ ಇಂಡಿಯಾದ ಹೈದರಾಬಾದ್ ಮತ್ತು ಬೆಂಗಳೂರು ವಲಯದ ಕಾರ್ಮಿಕರು ಅನಿರ್ಧಿಷ್ಟ ಕಾಲದ ಮುಷ್ಕರವನ್ನು ಪ್ರಾರಂಭಿಸಿದ್ದಾರೆ. ತರಬೇತಿ ನೀಡದೆ ಇದ್ದರೂ ಪರೀಕ್ಷೆಗೆ ಕುಳಿತುಕೊಳ್ಳಬೇಕೆಂದು ಅಪ್ರೆಂಟಿಸ್ ಕಾರ್ಮಿಕ ಮುರಲಿ ಮೋಹನ್ ಅವರನ್ನು ಮ್ಯಾನೇಜುಮೆಂಟು ಒತ್ತಾಯಿಸಿದಾಗ, ಮುರಲಿಮೋಹನ್ ಒಪ್ಪದಕ್ಕೆ ಕೆಲಸದಿಂದ ಕಿತ್ತು ಹಾಕಲಾಗಿದೆ. ಮುರಲಿಮೋಹನ್ ಅವರನ್ನು ಕೆಲಸಕ್ಕೆ ಮತ್ತೆ ಸೇರಿಸಿಕೊಳ್ಳಬೇಕೆಂಬುದು ಮೊದಲ ಬೇಡಿಕೆಯಾಗಿದೆ. ಇವರು ಯೂನಿಯನ್ನಿನ ಮುಖ್ಯ ಕಾರ್ಯಕರ್ತರಾಗಿರುವರು. ಇನ್ನೊಬ್ಬ ಕಾರ್ಮಿಕರನ್ನು ಕಾರಣಗಳಿಲ್ಲದೆ ಮತ್ತೊಂದು ಡಿಪಾರ್ಟ್‌ಮೆಂಟಿಗೆ ವರ್ಗಾಯಿಸಿದ್ದಕ್ಕೆ, ಕಾರಣವೇನೆಂದು ಕೇಳಿದ್ದಕ್ಕೆ ಕಾರ್ಮಿಕನನ್ನು ಆಫೀಸಿನಲ್ಲಿ ಕೂರಲು ಡಿವಿಜನಲ್ ಮ್ಯಾನೇಜರ್ ಬಿಡದ್ದು ಸರಿಯಿಲ್ಲ ಮತ್ತು ಈ ಡಿವಿಜನಲ್ ಮ್ಯಾನೇಜರ್ ಕ್ಷಮೆ ಕೇಳಬೇಕು ಎಂಬುದು ಎರಡನೇ ಬೇಡಿಕೆ. ಇವೆರಡಲ್ಲದೆ ಹಲವು ಬೇಡಿಕೆಗಳನ್ನು ಮುಂದಿಟ್ಟು ಕಾರ್ಮಿಕರು ಮುಷ್ಕರದಲ್ಲಿ ತೊಡಗಿದ್ದಾರೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಚುನಾವಣಾಪ್ರಣಾಳಿಕೆ

ದೇಶದ ಒಂದು ಕಡೆ ಭೀಕರ ಬರಗಾಲ ಮತ್ತೊಂದು ಕಡೆ ಪ್ರವಾಹದ ಹಾವಳಿ. ಬೆಲೆ ಏರಿಕೆ, ನಿರುದ್ಯೋಗ ಮತ್ತು ಕೆಲಸ ಕಳೆದುಕೊಳ್ಳುವಿಕೆಯಿಂದ ಜನರ ಕಷ್ಟಕೋಟಲೆಗಳು ಹೆಚ್ಚಾಗುತ್ತಿವೆ. ಈ ಪರಿಸ್ಥಿತಿಯಲ್ಲಿ ಲೋಕಸಭೆಗೆ ಮಧ್ಯಕಾಲೀನ ಚುನಾವಣೆಗಳು ಜರುಗಬೇಕಾಗಿದೆ.

ಭೀಕರ ಬರಗಾಲದಿಂದ,ಪ್ರವಾಹದ ಹಾವಳಿಯಿಂದ ವರ್ಣಿಸಲಸಾಧ್ಯವಾದ ಕಷ್ಟನಷ್ಟಗಳಿಗೆ ಒಳಗಾಗಿರುವ ನಮ್ಮ ಜನತೆಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ತನ್ನ ತೀವ್ರ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತದೆ. ಕಷ್ಟಗಳಿಂದ ನರಳುತ್ತಿರುವ ನಮ್ಮ ಅಕ್ಕ-ತಂಗಿಯರಿಗೆ, ಅಣ್ಣ-ತಮ್ಮಂದಿರಿಗೆ ತನ್ನ ಕೈಲಾದ ಎಲ್ಲ ಸಹಾಯವನ್ನು ಮಾಡುತ್ತದೆ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಜನತೆಗೆ ಭರವಸೆ ನೀಡುತ್ತದೆ.

ತಮ್ಮ ನೀತಿಗಳಿಂದಾಗಿ ಜನತೆಯ ಕಷ್ಟಕೋಟಲೆಗಳನ್ನು ಹೆಚ್ಚಿಸಿದ ಎಲ್ಲರಿಗೂ ತಕ್ಕ ಉತ್ತರವನ್ನು ಮುಂಬರುವ ಚುನಾವಣೆಗಳಲ್ಲಿ ಜನರು ಕೊಡಬೇಕು. ಮುಂಬರುವ ಚುನಾವಣೆಗಳು ಇದಕ್ಕೆ ಒಂದು ಒಳ್ಳೆಯ ಅವಕಾಶವಾಗಿದೆ.

ಜನ ಸಮೂಹಕ್ಕೆ ತಾವಿತ್ತ ಎಲ್ಲ ಭರವಸೆಗಳನ್ನು ಮರೆತವರಿಗೆ ಈ ಚುನಾವಣೆಗಳಲ್ಲಿ ಸರಿಯಾದ ಉತ್ತರ ಕೊಡಬೇಕು. ಜನತೆಯ ಎಲ್ಲ ಸ್ವಾತಂತ್ರ್ಯಗಳನ್ನು ಕಿತ್ತುಕೊಂಡು ಆಸಕ್ತ ಹಿತಗಳು ಬೆಳೆಯುವಂತೆ ಮಾಡಿದ ಎಲ್ಲರೂ ಈ ಚುನಾವಣೆಗಳಲ್ಲಿ ಗಂಟುಮೂಟೆ ಕಟ್ಟಿಕೊಂಡು ಹೋಗುವಂತೆ ಜನರು ತಮ್ಮ ಅಧಿಕಾರ ಚಲಾಯಿಸಬೇಕು.

ಪ್ರಜಾಪ್ರಭುತ್ವ ಮತ್ತು ಸರ್ವಾಧಿಕಾರದ ನಡುವೆ ಸಮರ :

ಪ್ರಜಾಪ್ರಭುತ್ವ ಮತ್ತು ಸರ್ವಾಧಿಕಾರದ ನಡುವೆಯೇ ಮತ್ತೊಂದು ಸಲ ಸಮರ ನಡೆಯುತ್ತಿದೆ. ಸರ್ವಾಧಿಕಾರವನ್ನು ಪ್ರತಿನಿಧಿಸುವ ಇಂದಿರಾಗಾಂಧಿ ನೇತೃತ್ವದ ಕಾಂಗ್ರೆಸ್ (ಐ) ಪಕ್ಷವು ಮತ್ತೆ ತುರ್ತುಪರಿಸ್ಥಿತಿಯ ಕಾಲದ ಎಲ್ಲ ಶಸ್ತ್ರಾಸ್ತ್ರಗಳನ್ನು ಹಿಡಿದುಕೊಂಡು ಚುನಾವಣಾ ಕಣದತ್ತ ಹೊರಟಿದೆ.

ಆರ್. ಎಸ್. ಎಸ್. – ಜನಸಂಘದಂತಹ ಕೋಮುವಾದಿಗಳ ಜಾತಿವಾದಿಗಳ ಬಿಗಿ ಹಿಡಿತದಲ್ಲಿರುವ ಜನತಾ ಪಕ್ಷವು ಮತ್ತೊಂದು ಪ್ರತಿಗಾಮಿ ಶಕ್ತಿಯ ಸವಾಲಾಗಿ ಜನತೆಯ ಮುಂದೆ ನಿಂತಿದೆ.

ಸರ್ವಾಧಿಕಾರಿ ಧೋರಣೆಗಳನ್ನು ಬಹಿರಂಗವಾಗೇ ಸಮರ್ಥಿಸುತ್ತಿರುವ ಕಾಂಗ್ರೆಸ್ (ಐ) ಪಕ್ಷವು ಮುಖ್ಯ ಅಪಾಯವಾಗಿದ್ದುಅದನ್ನೂ ಹೋರಾಡಬೇಕಾಗಿದೆ. ಜನತಾ ಸರ್ಕಾರದ ಜನವಿರೋಧಿ ನೀತಿಗಳಿಂದಾಗಿ ಜನತೆಯಲ್ಲಿ ಹುಟ್ಟಿರುವ ಅಸಂತೃಪ್ತಿಯನ್ನು ಕಾಂಗ್ರೆಸ್(ಐ) ಪಕ್ಷವು ಉಪಯೋಗಿಸಿಕೊಳ್ಳುತ್ತಿದೆ. ಸುಭದ್ರ ಸರ್ಕಾರವನ್ನು ತಾನು ಕೊಡುತ್ತೇನೆ, ಜನತೆಯ ಎಲ್ಲ ಬೇಡಿಕೆಗಳನ್ನು ಈಡೇರಿಸುತ್ತೇನೆ ಎಂದು ಅದು ಹೊರಟಿದೆ.

ಸುಮಾರು ಒಂದು ದಶಕ ರಾಜ್ಯವಾಳಿದ ಇಂದಿರಾ ಸರ್ಕಾರದ ಸಾಧನೆಯಾದರೂ ಏನು ? ಜನತೆಯ ಯಾವ ಬೇಡಿಕೆಗಳನ್ನು ಆಕೆ ಪೂರೈಸಿದಳು ? ಗುಡಿಸಲು ನಿವಾಸಿಗಳಿಗೆ, ಸಾಮಾನ್ಯ ಜನರಿಗೆ ಎಂತಹ ಭದ್ರತೆಯನ್ನು ಕೊಟ್ಟಳು? ಆಕೆಯ ವರ್ಗನೀತಿಗಳಿಂದ ದೇಶ ಹಾಳಾಗಲಿಲ್ಲವೆ ? ಶ್ರೀಮಂತರು ಮತ್ತಷ್ಟು ಶ್ರೀಮಂತರಾಗಲಿಲ್ಲವೇ?

1967-77ರ ಅವಧಿಯಲ್ಲಿ ಆಹಾರದ ಉತ್ಪಾದನೆಯ ವರ್ಷಂಪ್ರತಿ ಬೆಳವಣಿಗೆ ಗತಿ ಕೇವಲ ಶೇ. 1.85 ರಷ್ಟು ಇತ್ತು. ಇದಕ್ಕೆ ಮುಂಚಿನ ಅವಧಿಗೆ ಹೋಲಿಸಿದರೆ ಇದು ತೀರಾ ಕಡಿಮೆ.

ಇದೇ ದಶಕದಲ್ಲಿ ಕೃಷಿ ಉತ್ಪಾದನೆಯಲ್ಲಿನ ಬೆಳವಣಿಗೆ ವರ್ಷಂಪ್ರತಿ ಶೇ. 2.13ರಷ್ಟು ಇತ್ತು.

ಕೈಗಾರಿಕಾ ಕ್ಷೇತ್ರದಲ್ಲಿನ ಬೆಳವಣಿಗೆಯ ಗತಿ ಕೇವಲ ಶೇ. 4.13ರಷ್ಟು ಇತ್ತು.

ಒಟ್ಟಾರೆ ಬೆಳವಣಿಗೆಯ ಗತಿ ವರ್ಷಕ್ಕೆ ಶೇ. 3.8 ರಿಂದ 3.5 ರಷ್ಟು ಇತ್ತು.

ಬಂಡವಾಳಶಾಹಿ ಪದ್ಧತಿಯ ಪೂರ್ವದ ಭೂಸಂಬಂಧಗಳನ್ನು ಉಳಿಸಿಕೊಂಡೇ ಬಂಡವಾಳಶಾಹಿ ಪಥವನ್ನು ಅನುಸರಿಸಿದ ಇಂದಿರಾಗಾಂಧಿ ನಾಡಿನಲ್ಲೆಲ್ಲಾ ಕಷ್ಟಕೋಟಲೆಯನ್ನು ಉಂಟುಮಾಡಿದಳು.

ಇಪ್ಪತ್ತು ಅಂಶದ ಕಾರ್ಯಕ್ರಮದ ದಗಲಬಾಜಿತನ:

ಇಂದಿರಾಗಾಂಧಿ ಹಳ್ಳಿಜನರ ಬಗ್ಗೆ ಬೆಣ್ಣೆಯಂತಹ ಮಾತನ್ನಾಡುತ್ತಾಳೆ. ಹಳ್ಳಿ ಜನರಿಗೆ ಪ್ರಾಶಸ್ತ್ಯ ಕೊಡಲಾಗಿದೆ ಎನ್ನಲಾದ ಇಪ್ಪತ್ತು ಅಂಶದ ಕಾರ್ಯಕ್ರಮವನ್ನು ಮತ್ತೆ ತಂದು ಜನರಿಗೆ ಮೋಸ ಮಾಡಬೇಕೆಂದು ಆಕೆ ನಿರ್ಧರಿಸಿದ್ದಾಳೆ.

ಆದರೆ ಆಕೆಯ ಆಳ್ವಿಕೆಯ ಕಾಲದಲ್ಲಿ 1971-72ರಲ್ಲಿ ಹಳ್ಳಿಗಾಡಿನ ಕಡುಬಡವರಾದ ಶೇ. 10ರಷ್ಟು ಜನರಿಗೆ ಕೇವಲ ಶೇ. 0.1ರಷ್ಟು ಮಾತ್ರ ಜಮೀನಿತ್ತು.

ಆಕೆ ಭೂಹಂಚಿಕೆಯ ಮಾತನ್ನಾಡಿ ಮೋಸ ಮಾಡಿದಳು. ತುರ್ತುಪರಿಸ್ಥಿತಿಯನ್ನು ಘೋಷಿಸಿದ್ದನ್ನು, ಮೂಲಭೂತ ಹಕ್ಕುಗಳ ನಾಶವನ್ನು ಆಕೆ ಇಪ್ಪತ್ತು ಅಂಶದ ಕಾರ್ಯಕ್ರಮದ ಹೆಸರಿನಲ್ಲಿ, ಸಂವಿಧಾನದ ದಾರಿಸೂಚಕ ನೀತಿಗಳನ್ನು ಅನುಸರಿಸುವ ಹೆಸರಿನಲ್ಲಿ ಸಮರ್ಥಿಸಿಕೊಂಡಳು.

ಆದರೆ ಇದರಿಂದ ರೈತರಿಗಾದ ಲಾಭವಾದರೂ ಏನು ? ತುರ್ತುಪರಿಸ್ಥಿತಿ ಜಾರಿಗೆ ಬಂದು ಸುಮಾರು ದಿನಗಳಾದ ಮೇಲೆ 1977ರ ಜುಲೈ ತಿಂಗಳಿನಲ್ಲಿ ಕೊಡಲಾದ (ಮೋಸದ) ಅಂಕಿ ಅಂಶಗಳ ಪ್ರಕಾರ 5.32 ಮಿಲಿಯನ್ ಎಕರೆ ಹೆಚ್ಚುವರಿ ಜಮೀನಿತ್ತು. ಹೆಚ್ಚುವರಿ ಎಂದು ಘೋಷಿಸಲಾದ ಜಮೀನು 4.04 ಮಿಲಿಯನ್ ಎಕರೆ ಇತ್ತು. ಸರ್ಕಾರ ವಶಪಡಿಸಿಕೊಂಡ ಜಮೀನು 2.10 ಮಿಲಿಯನ್ ಎಕರೆ. ಅದರಲ್ಲಿ ನಿಜವಾಗಲೂ ಹಂಚಲಾದ ಜಮೀನು ಕೇವಲ 1.29 ಮಿಲಿಯನ್ ಎಕರೆಗಳು.

ಈ ಹಂಚಲಾದ ಜಮೀನಿನಲ್ಲಿ ಬಹುಪಾಲು ಬಂಜರೇ ಆಗಿತ್ತು ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ.

ಸ್ಯಾಂಪಲ್ ಸಮೀಕ್ಷೆಗಳು ಸುಮಾರು 40 ದಶಲಕ್ಷ ಎಕರೆ ಜಮೀನಿದೆ ಎಂದು ಅಂದಾಜು ಮಾಡಿದ್ದವು. ಹೆಚ್ಚುವರಿ ಜಮೀನಿನ ಬಗ್ಗೆ ಇಂದಿರಾ ಸುಳ್ಳು ಅಂಕಿ-ಸಂಖ್ಯೆ ಕೊಡಲಿಲ್ಲವೇ ?

ಇಂದಿರಾಗಾಂಧಿ ಮತ್ತು ಇಂದಿರಾ ಕಾಂಗ್ರೆಸ್ ಪಕ್ಷ ಕೃಷಿಕಾರ್ಮಿಕರ ಕಷ್ಟ ಕಾರ್ಪಣ್ಯಗಳ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಾರೆ. ಆದರೆ ಇಂದಿರಾ ಸರ್ಕಾರದಡಿ ಅವರ ಬದುಕು ಉತ್ತಮಗೊಳ್ಳುವ ಬದಲು ಹದಗೆಡಲಿಲ್ಲವೇ ?

ಯೋಜನಾ ಆಯೋಗದ ಇತ್ತೀಚಿನ ವರದಿ ಪ್ರಕಾರ 1960-61 ರಲ್ಲಿ ಕೃಷಿಕಾರ್ಮಿಕನೊಬ್ಬನ ನಿಜವೇತನ ರೂ. 1.43 ಆಗಿತ್ತು. 1967-68 ರಲ್ಲಿ ಅದು ರೂ. 1.27ಕ್ಕೆ ಇಳಿಯಿತು. ಇಂದಿರಾ ಸರ್ಕಾರದ 7 ವರ್ಷದ ಆಳ್ವಿಕೆಯ ನಂತರ ಅದು 1974-75 ರಲ್ಲಿ ರೂ. 1.17ಕ್ಕೆ ಕುಸಿದಿತ್ತು. 1961-62ಕ್ಕೆ ಹೋಲಿಸಿದರೆ, ತುರ್ತು ಪರಿಸ್ಥಿತಿಯಲ್ಲಿನ ಕೂಲಿ ರೂ. 1.5 ರಷ್ಟು ಕಡಿಮೆ ಇತ್ತು.

ಇಂದಿರಾ ರಾಜ್ಯಾಡಳಿತದಲ್ಲಿ ನಡೆದ ಗರೀಬಿ ಹಟಾವೋದ ವಿಜೃಂಭಣೆ ಇದು.

ದಾರಿದ್ರ್ಯ ರೇಖೆಯ ಕೆಳಗಿರುವ ಜನರು :

ಗರೀಬಿ ಹಟಾವೋ ಜನದ ಬೇರೆ ಸಾಧನೆಗಳೇನು ? 1972 ರಷ್ಟರಲ್ಲಿ ದಾರಿದ್ರ್ಯ ರೇಖೆಯ ಕೆಳಗೆ ಬದುಕುವವರು (ಅಂದರೆ ನಗರಗಳಲ್ಲಿ ರೂ. 30 ಮತ್ತು ಹಳ್ಳಿಗಳಲ್ಲಿ ರೂ. 20 ಕ್ಕಿಂತ ಕಡಿಮೆ ಖರ್ಚು ಮಾಡುವ ಜನರು) ಹಳ್ಳಿಗಾಡಿನಲ್ಲಿ ಶೇ. 44.57 ರಷ್ಟು ಮತ್ತು ನಗರದಲ್ಲಿ ಶೇ. 51.34ರಷ್ಟು ಇದ್ದರು. ತುರ್ತುಪರಿಸ್ಥಿತಿಯ ಅಂತ್ಯದ ವೇಳೆಗೆ ದಾರಿದ್ರ್ಯ ರೇಖೆಯ ಕೆಳಗೆ ಬದುಕುವವರ ಸಂಖ್ಯೆ ಶೇ. 70ರಷ್ಟು ಏರಿತ್ತು ಎಂದು ಅಂದಾಜು ಮಾಡಲಾಗಿದೆ.

ಇಪ್ಪತ್ತು ಅಂಶದ ಕಾರ್ಯಕ್ರಮದ ಯಾವ ಅಂಶಗಳನ್ನು ಕಾರ್ಯಗತಗೊಳಿಸಲಾಯಿತು ?

ಭೂ ಹಂಚಿಕೆಯೊಂದು ಕ್ರೂರ ಪರಿಹಾಸ್ಯವಾಯಿತು. ಮನೆಗಳಿಗೆ ಸೈಟು ಹಂಚುವ ಕಾರ್ಯಕ್ರಮವೂ ಒಂದು ಮೋಸ: ಈ ಸೈಟುಗಳನ್ನು ಜನ ಉಪಯೋಗಿಸಿಕೊಳ್ಳಲೇ ಇಲ್ಲ ಏಕೆಂದರೆ ಇವುಗಳಲ್ಲಿ ಬಹುಪಾಲು ನೆರೆಯಿಂದ ಕೊಚ್ಚಿಹೋಗುವಂತಹಸ್ಥಳದಲ್ಲಿದ್ದವು. ಇಲ್ಲವೇ ಕೆರೆಯಿಂದ ಮುಚ್ಚಿಹೋಗುವಂತ ಸ್ಥಳದಲ್ಲಿದ್ದವು. ಜೀತದಿಂದ ಬಿಡುಗಡೆ ಮತ್ತು ಋಣವಿಮುಕ್ತಿ ಕಾರ್ಯಕ್ರಮಗಳಿಗೂ ಇದೇ ಗತಿ ಆಯಿತು. ಭಾರತದಲ್ಲಿ ಇಂದು ಸಾವಿರಾರು ಜೀತದಾಳುಗಳು ಇದ್ದಾರೆ.

ಜನರಿಗೆ ಅಗ್ಗಬೆಲೆಯ ಬಟ್ಟೆಯನ್ನು ಹಂಚುವ ಕಾರ್ಯಕ್ರಮವೂ ತುಸ್ಸೆಂದಿತು.

ದಾರಿದ್ರ್ಯ ರೇಖೆಯ ಕೆಳಗೆ ಬದುಕುವವರ ಸಂಖ್ಯೆ ಹೆಚ್ಚುವುದರ ಜೊತೆಗೆ ಅಪಾರ ಹಣವಿರುವವರ ಸಂಖ್ಯೆಯೂ ಹೆಚ್ಚಿತು.

ಹಳ್ಳಿಗಾಡಿನ ಜಮೀನಿನ ಶೇ. 30 ರಷ್ಟು ಭಾಗವನ್ನು ಕೇವಲ ಶೇ. 6 ರಷ್ಟು ಜಮೀನುದಾರರು ತಮ್ಮ ಒಡೆತನದಲ್ಲಿ ಇಟ್ಟುಕೊಂಡಿದ್ದರು.

1969ರಲ್ಲಿ ಕೇವಲ 20 ಗ.ತ್ರೀದಾರಿ ಮನೆತನಗಳ ಆಸ್ತಿ ರೂ. 2430 ಕೋಟಿ ಆಗಿತ್ತು. ಇದು 1972 ರಲ್ಲಿ ರೂ. 3059 ಕೋಟಿಗೆ ಏರಿತು. ಅಂದರೆ ಶೇ. 25 ರಷ್ಟು ಹೆಚ್ಚಳ. ಮತ್ತೆ 1978ರಲ್ಲಿ ಇದು ರೂ. 4465 ಕೋಟಿ ಆಯಿತು. ಅಂದರೆ ಶೇ. 45 ರಷ್ಟು ಹೆಚ್ಚಳ.

ಈ 20 ಮನೆಗಳಲ್ಲಿ ಎರಡು ಮನೆತನಗಳು ರೂ. 2139.5 ಕೋಟಿ ಆಸ್ತಿಯನ್ನು ಹೊಂದಿವೆ. ಅಂದರೆ ದೊಡ್ಡ ಮನೆತನಗಳ ಶೇ. 40 ರಷ್ಟು.

1972-1977ರ ನಡುವಿನಲ್ಲಿ ಟಾಟಾಗಳ ಆಸ್ತಿ ರೂ. 641.93 ಕೋಟಿಯಿಂದ ರೂ. 1069.28 ಕೋಟಿಗೆ ಏರಿತು. ಬಿರ್ಲಾಗಳ ಆಸ್ತಿ ರೂ. 589.40 ಕೋಟಿಯಿಂದ ರೂ. 1070.20 ಕೋಟಿಗೆ ಏರಿತು. ತುರ್ತುಪರಿಸ್ಥಿತಿಯ ವರ್ಷಗಳು ಜನರಿಗೆ ಸಂಕಷ್ಟದ ವರ್ಷಗಳಾಗಿದ್ದವು.

ತುರ್ತುಪರಿಸ್ಥಿತಿ ಬರುವುದಕ್ಕೆ ಎರಡು ವರ್ಷ ಮುಂಚೆ ಜನರು ತೀವ್ರತರವಾದ ಹಣದುಬ್ಬರಕ್ಕೆ ತುತ್ತಾಗಿದ್ದರು. ಒಂದೇ ವರ್ಷದಲ್ಲಿ ಬೆಲೆಗಳು ಶೇ. 30 ರಷ್ಟು ಏರಿದವು.

ಈ ಹಣದುಬ್ಬರವನ್ನು ಕೊನೆಗೊಳಿಸಲು ಇಂದಿರಾ ಸರ್ಕಾರ ಪ್ರಯತ್ನಿಸಿದಾಗ ಜನರಿಗೆ ಮತ್ತೆ ಏಟುಬಿತ್ತು. ತುಟ್ಟಿಭತ್ಯೆ ಮತ್ತು ವೇತನದ ಏರಿಕೆಯನ್ನು ನಿಲ್ಲಿಸಲಾಯಿತು. ಸಿ. ಡಿ. ಎಸ್. ತರಲಾಯಿತು. ಡಿ. ಎ. ಮತ್ತುಬೋನಸ್ಸನ್ನು ಕಡಿಮೆಮಾಡಿತು. ವರ್ಷದಿಂದ ವರ್ಷಕ್ಕೆ ಜನರ ಮೇಲೆ ತೆರಿಗೆಯನ್ನು ಹೇರಲಾಯಿತು.

ಇಂದಿರಾ ಸರ್ಕಾರದ ಆಡಳಿತ ಕಾಲದಲ್ಲಿ ನಿರುದ್ಯೋಗಿಗಳ ಸಂಖ್ಯೆ ಒಂದು ಕೋಟಿಗೇರಿತು. ಇದಕ್ಕಿಂತ ಮುಂಚಿನ ದಶಕದಲ್ಲಿ 45 ಲಕ್ಷ ನಿರುದ್ಯೋಗಿಗಳಿದ್ದರು.

ಇಂದಿರಾ ಆಳ್ವಿಕೆಯ ಕಾಲದಲ್ಲಿ ಬೆಲೆಯೇರಿಕೆಯಿಂದ ಜನರು ಕಷ್ಟಪಟ್ಟಷ್ಟು ಎಂದೂ ಸ್ವಾತಂತ್ರ್ಯದ ನಂತರ ಕಷ್ಟಪಟ್ಟಿರಲಿಲ್ಲ.

ಇದೆಲ್ಲಕ್ಕೂ ಕಿರೀಟ ಇಟ್ಟಂತೆ, ವಿದೇಶಿ ಸಾಲಗಳು ಹೆಚ್ಚಾಗಿ ಸಾಮ್ರಾಜ್ಯಶಾಹಿ ರಾಷ್ಟ್ರಗಳ ಮೇಲಿನ ಅವಲಂಬನೆ ಹೆಚ್ಚಾಗಿದೆ. ಸಾಲದ ಮೇಲಿನ ಬಡ್ಡಿ ತೆರುವುದು ಹೆಚ್ಚಾಗಿ ಜನರ ಹಿತಾಸಕ್ತಿಗೆ ಧಕ್ಕೆ ಬರುವಂತೆ ರಫ್ತು ಮಾಡಬೇಕಾಗಿ ಬಂದಿದೆ.

ತುರ್ತುಪರಿಸ್ಥಿತಿ ರಾಜ್ಯಭಾರ :

1971–77ರ ನಡುವೆ ಇಂದಿರಾ ಸರ್ಕಾರ ಜನರ ವಿರುದ್ಧ ಎಸಗಿದಷ್ಟು ಅಪರಾಧಗಳನ್ನು ಬೇರೆ ಯಾವ ಸರ್ಕಾರವೂ ಮಾಡಿಲ್ಲ.

ಶೋಷಣೆಯ ದಮನದ ಈ ನೀತಿಗಳು ತುರ್ತುಪರಿಸ್ಥಿತಿ ಮತ್ತು ಪ್ರತಿಗಾಮಿ ಸಂವಿಧಾನ ತಿದ್ದುಪಡಿಗಳಲ್ಲಿ ಪರ್ಯವಸಾನಗೊಂಡವು.

ಒಂದೇ ಏಟಿಗೆ ಮುಷ್ಕರ, ಪ್ರದರ್ಶನ, ಸಭೆಗಳು ಮತ್ತು ಪ್ರಚಾರ ಪ್ರಕ್ಷೋಭೆಗಳನ್ನು ಬಹಿಷ್ಕರಿಸಲಾಯಿತು. ಭೂಮಾಲೀಕರು, ಬಂಡವಾಳಶಾಹಿಗಳು ಮತ್ತು ಸರ್ಕಾರದ ವಿರುದ್ಧ ಹೋರಾಡುತ್ತಿದ್ದ ಕಾರ್ಮಿಕರು, ನೌಕರರು, ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರು ನಿಸ್ಸಹಾಯಕರಾದರು. ಇಡೀ ದೇಶವೇ ದಮನಕ್ಕೊಳಗಾದ ಜನರ ದೇಶವಾಯಿತು.

ಸಾವಿರಾರು ಜನರನ್ನು ಬೇಕಾಬಿಟ್ಟಿ ಬಂಧಿಸಲಾಯಿತು. ಜೈಲಿನಲ್ಲಿ ಚಿತ್ರಹಿಂಸೆ ಕೊಡಲಾಯಿತು. ಪೋಲೀಸ್ ಕಸ್ಟಡಿಯಲ್ಲಿದ್ದವರನ್ನು ನಿರ್ದಯವಾಗಿ ಕೊಲ್ಲಲಾಯಿತು. ಜನರ ಬಾಯಿಬಿಡಿಸಲು ಚಿತ್ರಹಿಂಸೆ ಕೊಡುವ ಹೊಸ ವಿಧಾನಗಳನ್ನು ಕೊಡಲಾಯಿತು. ಕೇರಳದ ರಾಜನ್‌ನ್ನು ಪೋಲೀಸರು ಕೊಲೆ ಮಾಡಿದ್ದು ಎಲ್ಲರಿಗೂ ಗೊತ್ತಿದೆ. ಇದಲ್ಲದೆ, ಇಂದಿರಾ ಪೋಲೀಸರ ಕೈಯಲ್ಲಿ ಸಾವಿರಾರು ಜನರು ಚಿತ್ರಹಿಂಸೆಗೀಡಾದರು.

1972ರಲ್ಲೇ ಇಂದಿರಾ ಭಯೋತ್ಪಾದಕ ವಿಧಾನಗಳನ್ನು ಅನುಸರಿಸಿದಳು. ಪಶ್ಚಿಮ ಬಂಗಾಳದಲ್ಲಿ ನಮ್ಮ ಪಕ್ಷದ ಸಾವಿರ ಕಾರ್ಯಕರ್ತರು ಹತರಾದರು—ಕೊಲೆ ಮಾಡಿದವರು ಗೂಂಡಾಗಳು ಮತ್ತು ಗುಪ್ತ ಪೋಲೀಸ್ ದಳದವರು. ಜನರನ್ನು ಹಿಂಸಿಸಲು, ಕೊಲ್ಲಲು ಆಡಳಿತ ವ್ಯವಸ್ಥೆಗೆ ತುರ್ತುಪರಿಸ್ಥಿತಿಯ ಕಾಲದಲ್ಲಿ ಸಂಪೂರ್ಣ ಸ್ವಾತಂತ್ರ್ಯ ಕೊಡಲಾಗಿತ್ತು.

ಕಳೆದ ಎರಡೂವರೆ ವರ್ಷಗಳಲ್ಲಿ ಇಂದಿರಾ ಕಾಂಗ್ರೆಸ್ಸಿನ ಪಾತ್ರವೇನು ?

ತುರ್ತುಪರಿಸ್ಥಿತಿ ತಂದದ್ದರ ಬಗ್ಗೆ ಇಂದಿರಾ ಕಾಂಗ್ರೆಸ್ ಎಂದಾದರೂ ವಿಷಾದ ವ್ಯಕ್ತಪಡಿಸಿದೆಯೇ ? ಸಾವಿರಾರು ಜನರ ಬಂಧನ, ಕಿರುಕುಳ, ಚಿತ್ರಹಿಂಸೆ ಕೊಲೆಗಳು—ಇವುಗಳ ಬಗ್ಗೆ ಎಂದಾದರೂ ಪಶ್ಚಾತ್ತಾಪ ಪಟ್ಟಿದ್ದಾರೆಯೇ ? ಮುಸಲ್ಮಾನರ ಮತ್ತು ಇತರರನ್ನು ಹಿಡಿದುಕೊಂಡು ಕಡ್ಡಾಯವಾಗಿ ಆಪರೇಷನ್ ಮಾಡಿದ್ದು, ಇದಕ್ಕಾಗಿ ಪೋಲೀಸರು ಗೋಲಿಬಾರ್ ಮಾಡಿದ ಸಂಜಯಗಾಂಧಿ ದುಷ್ಟಕೂಟದ ಕೃತ್ಯಗಳನ್ನು ಅವರು ಖಂಡಿಸಿದ್ದಾರೆಯೇ

42ನೇ ತಿದ್ದುಪಡಿ ತಂದು ಸಂವಿಧಾನವನ್ನು ಧಿಕ್ಕರಿಸಿದ್ದೇವೆಂದು ಅವರು ಒಪ್ಪಿಕೊಂಡಿದ್ದಾರೆಯೇ ?

ಇದರ ಬಗ್ಗೆ ತಾತ್ಸಾರ ಬೇಡ. ಇಂದಿರಾಗಾಂಧಿಯನ್ನು ಚುನಾವಣೆಯಲ್ಲಿ ಸೋಲಿಸಿದ ನಂತರವೇ ಪತ್ರಿಕಾ ಸ್ವಾತಂತ್ರ್ಯ ದೊರಕಿದ್ದು ಎಂಬುದು ಎಲ್ಲರಿಗೂ ಗೊತ್ತಾಗಲಿ. ನ್ಯಾಯಾಲಯಗಳ ಅಧಿಕಾರವೂ ಆಗಲೇ ಮರಳಿ ದೊರೆತಿದ್ದು. ಮುಷ್ಕರ ಮಾಡುವ ಹಕ್ಕು, ಬೋನಸ್, ಸಿ.ಡಿ.ಎಸ್. ರದ್ದು, ಸಭೆ ನಡೆಸುವ ಹಕ್ಕು–ಇವುಗಳೆಲ್ಲವೂ ಇಂದಿರಾ ಸರ್ಕಾರವನ್ನು ಕೆಳಗುರುಳಿಸಿದ ನಂತರವೇ ದೊರಕಿದ್ದು.

ಅಮೇರಿಕಾ ಮತ್ತು ಸಿ. ಐ. ಎ. ವಿರುದ್ಧ ಇಂದಿರಾಗಾಂಧಿ ಭಾಷಣ ಬಿಗಿಯಬಹುದು. ಆದರೆ ಇಂದಿರಾ ಸರ್ಕಾರದಲ್ಲಿದ್ದಾಗಲೆ ಕಮ್ಯುನಿಸ್ಟರನ್ನು ಸೋಲಿಸಲು ಕಾಂಗ್ರೆಸ್ಸಿಗೆ ಸಿ.ಐ.ಎ. ದಿಂದ ಹಣ ಬಂದಿತ್ತೆಂಬುದು ನಿಜ.

ಕಳೆದ ಎರಡು ವರ್ಷಗಳಲ್ಲಿ ಕಾಂಗ್ರೆಸ್ (ಐ) 'ಸಾಧನೆ':

ಕಳೆದ ಎರಡು ವರ್ಷಗಳಲ್ಲಿ ಕಾಂಗ್ರೆಸ್ (ಐ) ಪಕ್ಷವು ಜನತೆಗಾಗಿ ಏನು ಮಾಡಿದೆ ? ಆಂಧ್ರ ಪ್ರದೇಶದಲ್ಲಿ ಅದರ ಸರ್ಕಾರದ ಸಾಧನೆ ಏನು ? ಅಲ್ಲಿ ಜನತೆಗೆ ಜಮೀನನ್ನು ಹಂಚಲಾಗಿದೆಯೆ ? ಗ್ರಾಮೀಣ ಪ್ರದೇಶದ ಭೂರಹಿತ ಕಾರ್ಮಿಕರಿಗೆ ವರ್ಷ ಪೂರ್ತಿ ಉದ್ಯೋಗ ಕೊಡುವ ಹಾಗೆ ಅಲ್ಲಿ ಏನನ್ನಾದರೂ ಮಾಡಲಾಗಿದೆಯೇ ?

ಕಾಂಗ್ರೆಸ್ (ಐ) ಸರ್ಕಾರದಡಿ ಆಂಧ್ರ ಪ್ರದೇಶದಲ್ಲಿ ಹರಿಜನರ ಮೇಲಿನ ಅತ್ಯಾಚಾರಗಳು ಎಂದಿನಂತೆ ಮುಂದುವರಿಯುತ್ತಲಿವೆ. ಚೆನ್ನಾರೆಡ್ಡಿಯವರ ಅಧಿಕಾರದಡಿ ಆಂಧ್ರದ ಜಮೀನ್ದಾರರು ಹರಿಜನರ ಮೇಲೆ ದಬ್ಬಾಳಿಕೆಯನ್ನು ಎಂದಿನಂತೆ ಮುಂದುವರಿಸುತ್ತಿದ್ದಾರೆ. ಭ್ರಷ್ಟಾಚಾರದಲ್ಲಿ ಆಂಧ್ರದ ಮಂತ್ರಿಮಂಡಲವು ಹೊಸದೊಂದು ದಾಖಲೆಯನ್ನೇ ಸ್ಥಾಪಿಸಿದೆ.

ಹರಿಜನರ ಮೇಲೆ ತನಗಿರುವ ಕಳಕಳಿಯನ್ನು ಇಂದಿರಾಗಾಂಧಿಯು ಹಗಲು ರಾತ್ರಿ ಮಾತನಾಡುತ್ತಿದ್ದಾರೆ. ಆದರೆ ಹರಿಜನರ ಮೇಲೆ ನಿರಂತರವಾಗಿ ನಡೆಯುತ್ತಿರುವ ಅತ್ಯಾಚಾರಗಳನ್ನು ತಡೆಯಲು ಆಕೆಯ ಪಕ್ಷದ ಸರ್ಕಾರವು ಏಕೆ ಏನನ್ನೂ ಮಾಡುತ್ತಿಲ್ಲ.

ತುರ್ತುಪರಿಸ್ಥಿತಿಯ ಕಾಲದ ತನ್ನ ಕ್ರಮಗಳನ್ನು ಬಿಟ್ಟುಕೊಟ್ಟಿಲ್ಲ ಎಂದು ಆಂಧ್ರದ ಮಂತ್ರಿಮಂಡಲ ತೋರಿಸುತ್ತಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸದಸ್ಯರ ಮೇಲೆ ಕೊಲೆಗಡುಕ ದಾಳಿಗಳನ್ನು ಈ ರಾಜ್ಯದಲ್ಲಿ ಮಾಡಲಾಗುತ್ತಿದೆ. ಇಲ್ಲಿನ ಪೋಲೀಸರು ಮಾತ್ರ ವೀಕ್ಷಕರಂತೆ ಎಲ್ಲವನ್ನೂ ನೋಡುತ್ತಿದ್ದಾರೆ. ಅಲ್ಪಸಂಖ್ಯಾತರ ಹಕ್ಕುಗಳ ಬಗ್ಗೆ, ಗಲಭೆಗಳಿಂದ ನೊಂದ ಮುಸಲ್ಮಾನರ ಬಗ್ಗೆ ಇವರು ತೋರಿಸುವಷ್ಟು ಹುಸಿ ಕಳಕಳಿ ಬೇರೆ ಯಾರೂ ತೋರಿಸಲಾರರು. ಆದರೆ ತುರ್ತುಪರಿಸ್ಥಿತಿಯಲ್ಲಿ ಸಾವಿರಾರು ಮುಸಲ್ಮಾನರ ಕೊಲೆಯನ್ನು ಆಕೆ ನಡೆಸಲಿಲ್ಲವೇ ?

ಹಾಗೆಯೇ, ಗೋಹತ್ಯೆ ನಿಷೇಧಿಸಬೇಕೆಂದು ವಿನೋಬಾಜಿತ್ತಾಯ ಮಾಡಿದಾಗ ಆಕೆ ಅದಕ್ಕೆ ಬಹಿರಂಗ ಬೆಂಬಲ ಕೊಡಲಿಲ್ಲವೇ ?

ಕಳೆದ ಎರಡೂವರೆ ವರ್ಷಗಳಲ್ಲಿ ಬೆಲೆಯೇರಿಕೆ, ನಿರುದ್ಯೋಗ, ಕಡಿಮೆ ವೇತನ ಮತ್ತು ಹಸಿವಿನಿಂದ ದೇಶಾದ್ಯಂತ ಜನರು ಕಷ್ಟಪಟ್ಟಿದ್ದಾರೆ. ಅವರಿಗೆ ಸಹಾಯ ಮಾಡಲು ಇಂದಿರಾ ಗಾಂಧಿ ಏನು ಮಾಡಿದ್ದಾಳೆ? ತನ್ನ ಡಂಗುರವನ್ನು ಮಾತ್ರ ಬಾರಿಸಿದ್ದಾಳೆ. ಉತ್ತರ ಪ್ರದೇಶ ಮತ್ತು ಮಧ್ಯ ಪ್ರದೇಶದಲ್ಲಿ ಮುಷ್ಕರಗಳನ್ನು ಬಹಿಷ್ಕರಿಸಿದಾಗ ಆಕೆ ಅದನ್ನು ವಿರೋಧಿಸಿದಳೇ ? ರೈಲ್ವೆ ಕಾರ್ಮಿಕರಿಗ ಬೋನಸ್ಸನ್ನು ಜನತಾ ಸರ್ಕಾರ ನಿರಾಕರಿಸಿದಾಗ ಅದನ್ನು ಆಕೆ ವಿರೋಧಿಸಿದಳೇ ? ಆಕೆ ಹಣದುಬ್ಬರದ ಮೂಲವಾದ ಖೋತ ಬಜ್ಜೆಟನ್ನು ವಿರೋಧಿಸುತ್ತಾಳೆಯೇ ? ನಮ್ಮ ದೇಶವನ್ನು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಒತ್ತೆಇಡುವ ವಿಶ್ವಬ್ಯಾಂಕ್ ಸಾಲಗಳನ್ನು ಆಕೆ ವಿರೋಧಿಸುತ್ತಾಳೆಯೇ ? ಬಿಕ್ಕಟ್ಟಿನ ಹೊರೆಯನ್ನು ಬಡವರಿಂದ ಶ್ರೀಮಂತರಿಗೆ ವರ್ಗಾಯಿಸುವ ಬಗ್ಗೆ ಆಕೆ ಏನಾದರೂ ಸಲಹೆ ಸೂಚನೆ ಕೊಟ್ಟಿದ್ದಾಳೆಯೇ ? ಜನತಾ ಪಕ್ಷದ ನೀತಿಗಳನ್ನು ಟೀಕಿಸಿ, ಚುನಾವಣೆಯಲ್ಲಿ ಪ್ರಯೋಜನ ಪಡೆಯುವ ಪ್ರಯತ್ನವನ್ನು ಬಿಟ್ಟು, ಆಕೆ ಬೇರೇನು ಮಾಡಿಲ್ಲ.

ದ್ರೋಹಿಗಳನ್ನು ತಿರಸ್ಕರಿಸಿ:

ಜನರನ್ನು ಗುಲಾಮಗಿರಿಗೆ ತಳ್ಳುವ ಹವಣಿಕೆಯಲ್ಲಿರುವ ಈ ಇಂದಿರಾಗಾಂಧಿಯ ದ್ರೋಹಿ ಶಕ್ತಿಯನ್ನು ಜನ ನಂಬಲಾರರು. ಸಂಜಯ ಬನ್ಸಿಲಾಲರೇ ಇಂದಿರಾ ಕಾಂಗ್ರೆಸನ್ನು ನಿಯಂತ್ರಿಸುತ್ತಿದ್ದಾರೆಂಬುದನ್ನು ಜನರು ತಿಳಿದುಕೊಳ್ಳಲಿ. ಸಂಸತ್ ಚುನಾವಣೆಗಳಲ್ಲಿ ಕಾಂಗ್ರೆಸ್ (ಐ)ಟಿಕೆಟ್‌ಗಳನ್ನು ಹಂಚುವಾಗ ಸಂಜಯ್‌ಗಾಂಧಿಯು ತನ್ನ ರೌಡಿಗ್ಯಾಂಗ್‌ಗೆ ಹೆಚ್ಚು ಟಿಕೆಟ್‌ಗಳನ್ನು ದೊರಕಿಸಿ ಅವರೇ ಹೆಚ್ಚು ಗೆದ್ದು ಬರುವಂತೆ ನೋಡಿಕೊಳ್ಳುತ್ತಿದ್ದಾನೆ.

ಇಂದಿರಾಗಾಂಧಿಯ ಅನೇಕ ಜೊತೆಗಾರರು ಹಲವಾರು ಭ್ರಷ್ಟಾಚಾರ ಪ್ರಕರಣಗಳಲ್ಲಿ, ಹಣದುರ್ವ್ಯವಹಾರಗಳಲ್ಲಿ ತೊಡಗಿದ್ದಾರೆ. ಚುನಾವಣೆಗಳಿಗಾಗಿ ಆಕೆ ಮತ್ತು ಆಕೆಯ ಸಹಚರರು ಅಗಾಧ ಪ್ರಮಾಣದ ವಸೂಲು ಮಾಡಿದ್ದಾರೆ. ಚುನಾವಣೆಗಳಲ್ಲಿ ಈ ಹಣವು ಪ್ರಧಾನ ಪಾತ್ರ ವಹಿಸುವುದು ಸತ್ಯ. ಭಾರತದಲ್ಲಿ ಅಮೆರಿಕಾದ ರಾಯಭಾರಿಯಾಗಿದ್ದ ಮೆಹ್ನಿಯಾನ್ ಅವರು, ಈ ದೇಶದಲ್ಲಿ ಕಮ್ಯುನಿಸ್ಟರನ್ನು ಸೋಲಿಸಲು ಇಂದಿರಾಗಾಂಧಿಗೆ ಎರಡು ಸಲ ಅಮೆರಿಕಾ ಹಣ ನೀಡಿತ್ತು ಎಂದು ಕೆಲವು ತಿಂಗಳುಗಳ ಹಿಂದೆಯಷ್ಟೇ ಹೇಳಿದ್ದರು.

ಕಾಂಗ್ರೆಸ್ (ಐ)ನೊಂದಿಗೆ ತನ್ನ ಸಂಬಂಧವಿರಿಸಿಕೊಂಡಿರದ ಯಾವ ಅನಿಷ್ಟವೂ ಇಲ್ಲ.

ಸರ್ವಾಧಿಕಾರವನ್ನು ಪ್ರತಿನಿಧಿಸುವ, ರಾಜ್ಯಾಂಗವನ್ನೇ ಬುಡಮೇಲು ಮಾಡಲು ಹವಣಿಸುತ್ತಿರುವ, ದೇಶದ ತುಂಬಾ ಭಯವನ್ನು ಉಂಟುಮಾಡುವ ಕಾಂಗ್ರೆಸ್ (ಐ) ಪಕ್ಷವೇ ಜನತೆಯ ಮಹಾನ್ ಶತ್ರು. ಈ ಶತ್ರುವನ್ನು ಯಾವ ಬೆಲೆ ತೆತ್ತಾದರೂ ಸೋಲಿಸಲೇಬೇಕು. ಇಂದಿರಾಗಾಂಧಿ ಪ್ರತಿನಿಧಿಸುತ್ತಿರುವ ಸರ್ವಾಧಿಕಾರಿ ಶಕ್ತಿಗಳನ್ನು ಸೋಲಿಸಲು ಎಲ್ಲ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಈ ಸಂದಿಗ್ಧ ಘಟ್ಟದಲ್ಲಿ ಒಂದಾಗಬೇಕು ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಕರೆಕೊಡುತ್ತದೆ.

ಇಂದು ಜನತಾಪಕ್ಷ :

ಜನತಾಪಕ್ಷಕ್ಕೆ ಮತ್ತೆ ಜನರು ಓಟು ಮಾಡಲು ಸಾಧ್ಯವೆ? ಎಂತಹ ದಾರುಣ ಸ್ಥಿತಿಯನ್ನು ಇಂದು ಅದು ಪ್ರದರ್ಶಿಸುತ್ತಿದೆ? ಭಾರಿ ಬಹುಮತದಿಂದ ಲೋಕಸಭೆಗೆ ಆಯ್ಕೆಯಾದ ಆ ಪಕ್ಷದ ಗತಿ ಏನಾಯಿತು. ತಮ್ಮೆಲ್ಲ ಆಸೆಗಳನ್ನು-ಭರವಸೆಗಳನ್ನು ಆ ಪಕ್ಷದಲ್ಲಿಟ್ಟು ರಾಷ್ಟ್ರದ ಪ್ರಗತಿ ಬಯಸಿದ ಜನತೆಗೆ ಸಿಕ್ಕಿದ್ದೇನು? ಎರಡುವರೆ ವರ್ಷದ ಒಳಗೇ ಅದು ಬಿದ್ದು ಹೋಯಿತು. ಯಾಕೆ ?

ಜನತೆಯಿಂದ ಅದು ದೂರಾಗಿದ್ದರಿಂದಲೇ ಅದು ಬಿದ್ದು ಹೋಗಬೇಕಾಯಿತು. ಅದರ ಒಗ್ಗಟ್ಟು ಮುರಿದು ಬಿತ್ತು.

ಜನತೆಯ ಆಶೋತ್ತರಗಳನ್ನು ಈಡೇರಿಸುವಲ್ಲಿ ಜನತಾ ನಾಯಕತ್ವ ಸಂಪೂರ್ಣ ವಿಫಲವಾಯಿತು.

ಅಧಿಕಾರಕ್ಕೆ ಬಂದ ತಕ್ಷಣ ಪ್ರಜಾಸತ್ತೆಯನ್ನು ಜನತೆಗೆ ವಾಪಸ್ಸು ಕೊಡುವಲ್ಲಿ ಅದು ಕೆಲವು ಕ್ರಮಗಳನ್ನು ತೆಗೆದುಕೊಂಡಿತು. ಪತ್ರಿಕೆಗಳ ಮೇಲಿನ ಪ್ರತಿಬಂಧವನ್ನು ಅದು ತೆಗೆದುಹಾಕಿತು. ಪತ್ರಿಕೆಗಳ ಸ್ವಾತಂತ್ರವನ್ನು ಮರಳಿಕೊಟ್ಟಿತು. ರಾಜ್ಯಾಂಗದ 42ನೇ ತಿದ್ದುಪಡಿಯಲ್ಲಿ ಇಂದಿರಾಗಾಂಧಿ ಮಾಡಿದ್ದ ಕೆಲವು ತಪ್ಪುಗಳನ್ನು ಅದು ಸರಿಮಾಡಿತು. ಆದರೆ ಮುಂಜಾಗರೂಕತಾ ಸ್ಥಾನಬದ್ಧತಾ ಕಾಯಿದೆಯನ್ನು ಅದು ಪೂರ್ತಿಯಾಗಿ ಕಿತ್ತುಹಾಕಲಿಲ್ಲ. ಅನೇಕ ಒತ್ತಾಯಗಳ ನಂತರ ಮೀಸಾ ಕಾಯಿದೆಯನ್ನು ಅದು ಕಿತ್ತುಹಾಕಿತು.

ತುರ್ತು ಪರಿಸ್ಥಿತಿಯ ಸಮಯದಲ್ಲಿ ಕಾನೂನಿಗೆ ವಿರೋಧವಾಗಿ ಕ್ರಮಗಳನ್ನು ಕೈಗೊಂಡು ಅನೇಕ ಅಪರಾಧಗಳನ್ನು ಮಾಡಿದ ಇಂದಿರಾಗಾಂಧಿ ಮತ್ತು ಇನ್ನೂ ಅನೇಕರ ಮೇಲೆ ಕಾನೂನುಕ್ರಮ ಕೈಗೊಳ್ಳಲು ಅನುವಾಗುವಂತಹ ವಿಶೇಷ ನ್ಯಾಯಾಲಯಗಳನ್ನು ತರುವಲ್ಲಿ ಜನತಾ ಸರ್ಕಾರವು ಧೈರ್ಯ ತೋರಿಸಿತು.

ಜನತೆಯ ಕೆಲವು ತುರ್ತು ಅವಶ್ಯಕತೆಗಳನ್ನು ಪೂರೈಸುವುದರಲ್ಲಿ ಜನತಾ ಸರ್ಕಾರವು ಕೆಲವು ಕ್ರಮಗಳನ್ನು ತೆಗೆದುಕೊಂಡಿತು. ಅದು ಕಡ್ಡಾಯ ಠೇವಣಾತಿಯನ್ನು ರದ್ದು ಮಾಡಿತು. 74ರ ರೈಲ್ವೆ ಮುಷ್ಕರದಲ್ಲಿ ಕೆಲಸದಿಂದ ಕಿತ್ತುಹಾಕಲ್ಪಟ್ಟಿದ್ದ ರೈಲ್ವೆ ನೌಕರರನ್ನು ಅದು ಪುನಃ ಕೆಲಸದ ಮೇಲೆ ತೆಗೆದುಕೊಂಡಿತು. ವಾರ್ಷಿಕ ಬೋನಸ್ ಕಾಯಿದೆಯನ್ನು ಜನತಾ ಸರ್ಕಾರ ಮರಳಿ ಸ್ಥಾಪಿಸಿತು.

ಹೊಸ ಮುಖ :

ಆದರೆ ಜನತಾ ಪಕ್ಷದ ಈ ನೀತಿಗಳು ಬಹಳ ಕಾಲ ಉಳಿಯಲಿಲ್ಲ. ಇನ್ನೊಂದು ವರ್ಷದೊಳಗೆ ಈ ಎಲ್ಲ ನೀತಿಗಳೂ ಬದಲಾಯಿಸಲ್ಪಟ್ಟವು. ಸರ್ವಾಧಿಕಾರಿ ಶಕ್ತಿಯ ವಿರುದ್ಧ ಅದರ ಹೋರಾಟ ಕುಂಠಿತಗೊಂಡಿತು. ಆರ್ಥಿಕ ಗಳಿಕೆಗಳಿಗಾಗಿ ಹೋರಾಡುತ್ತಿದ್ದವರನ್ನು ದಮನ ಮಾಡುವುದು ಜನತಾ ಸರ್ಕಾರದ ನಿತ್ಯದ ಪರಿಪಾಠವಾಯಿತು. ಮೀಸಾ ಕಾನೂನಿನಂತೆಯೇ ಇದ್ದ ಕಾನೂನುಗಳನ್ನು ಜಾರಿಗೆ ತರಲು ಕೆಲವು ರಾಜ್ಯಗಳ ಜನತಾ ಸರ್ಕಾರಗಳು ಶುರುಮಾಡಿದವು. ಮುರಾರ್ಜಿದೇಸಾಯಿಯವರ ಮುಖಾಂತರ ಆಂತರಿಕ ಭದ್ರತಾ ಶಾಸನವನ್ನು ಮತ್ತೆ ಜಾರಿಗೆ ತರಲು ಕೇಂದ್ರ ಸರ್ಕಾರ ತನ್ನ ಇಚ್ಛೆಯನ್ನು ವ್ಯಕ್ತಪಡಿಸಿತು.

ಪೋಲೀಸರ, ಕೇಂದ್ರ ಮೀಸಲು ಪಡೆಯವರ, ಕೇಂದ್ರ ಕೈಗಾರಿಕಾ ಭದ್ರತಾ ಪಡೆಯುವರ ಚಳುವಳಿಗಳನ್ನು ಸರ್ವಾಧಿಕಾರಿ ಮಾದರಿಯಲ್ಲಿ ನಿರ್ದಯದಿಂದ ದಮನ ಮಾಡಲಾಯಿತು. ಮತ್ತು ಇದನ್ನು ಸರ್ಕಾರವು ಸಂಸತ್ತಿನಲ್ಲಿ ಪ್ರಬಲವಾಗಿ ಸಮರ್ಥಿಸಿತು. ಜನತಾ ಸರ್ಕಾರವು ಪ್ರಜಾಪ್ರಭುತ್ವ ರಕ್ಷಣೆಯ ಮಾತಿನಿಂದ ದೂರ ಸರಿಯಿತು ಎಂಬುದನ್ನು ಅದರ ಈ ಎಲ್ಲ ಕ್ರಮಗಳೂ ತೋರಿಸಿದವು.

ಸಂಸತ್ತು ಸೇರುವುದಕ್ಕೆ ಕೆಲವು ದಿವಸಗಳ ಮುನ್ನ ಜನತಾ ಸರ್ಕಾರವು ಕಾರ್ಮಿಕ ವಿರೋಧಿಯಾದ ಎರಡು ಸುಗ್ರೀವಾಜ್ಞೆಗಳನ್ನು ಹೊರಡಿಸಿತು. ಸಂಸತ್ತಿನಲ್ಲಿ ಆಳುವ ಪಕ್ಷಕ್ಕೆ ಬಹುಮತವಿದ್ದು ಅದು ಹೀಗೆ ಮಾಡಿದುದು ಸರ್ವಾಧಿಕಾರಿಯಲ್ಲದೆ ಮತ್ತೇನು ?

ತಿಂಗಳುಗಳು ಉರುಳಿದಂತೆ ಜನತಾ ಸರ್ಕಾರವು ಜನತೆಯಿಂದ ದೂರವಾಗುತ್ತಾ ಹೋಗಿ ಸರ್ವಾಧಿಕಾರಿ ಕ್ರಮಗಳ ಮೇಲೆ ಅವಲಂಭಿಸಲಾರಂಭಿಸಿದ್ದು ಸ್ಪಷ್ಟವಾಗುತ್ತಾಬಂತು.

ಕಳೆದ ಚುನಾವಣೆಯಲ್ಲಿ ಸರ್ವಾಧಿಕಾರಿಗಳನ್ನು ಹೋರಾಡಲು ಜನತೆಯು ತಯಾರುಮಾಡಿದ್ದ ಆಯುಧವು ಕೆಳಕ್ಕೆ ಬಿದ್ದುಹೋಯಿತು.

ಆರ್ಥಿಕ ರಂಗದಲ್ಲಿ :

ಆರ್ಥಿಕ ರಂಗದಲ್ಲಿಯೂ ಸಹ ಜನತಾ ಸರ್ಕಾರವು ಪ್ರಗತಿ ಸಾಧಿಸದೆ ಹಿಂದೇಟು ಹಾಕಿತು. ಕಾಂಗ್ರೆಸ್ ಸರ್ಕಾರವು ಅನುಸರಿಸಿದ ಆರ್ಥಿಕ ನೀತಿಗಳನ್ನೇ ಜನತಾ ಸರ್ಕಾರವು ಅನುಸರಿಸಿ ಜನರ ಜೀವನವನ್ನು ಹಾಳುಮಾಡಿತು. ಬಂಡವಾಳಗಾರರು ಮತ್ತು ಜಮೀನ್ದಾರರು ಹೇಳಿದಂತೆ ಜನತಾ ಸರ್ಕಾರವು ತನ್ನ ನೀತಿಗಳನ್ನು ರೂಪಿಸಿತು.

ಖೋತಾ ಬಜೆಟ್ಟು ಶ್ರೀಸಾಮಾನ್ಯನ ಮೇಲೆ ವಿಪರೀತ ಕರಭಾರ ಮತ್ತು ವಿದೇಶಿ ನೆರವುಗಳು ಸರ್ಕಾರದ ಮುಖ್ಯ ಸಂಪನ್ಮೂಲಗಳಾದವು.

ತುರ್ತುಪರಿಸ್ಥಿತಿಯ ಸಮಯದಲ್ಲಿ ಇದ್ದಷ್ಟೇ ಬೆಲೆಏರಿಕೆಯು ಮುಂದುವರಿಯುತ್ತಿದ್ದರೂ ಬೆಲೆಗಳ ಏರಿಕೆಯನ್ನು ತಾನು ತಡೆಗಟ್ಟಿದ್ದೇನೆಂದು ಜನತಾ ಸರ್ಕಾರವು ಜಂಬಕೊಚ್ಚಿಕೊಳ್ಳುತ್ತಿತ್ತು.

ಸುಮಾರು 1000 ಕೋಟಿ ರೂ. ಗಳಷ್ಟು ಖೋತಾ ಬಜೆಟ್ಟು ಜನತಾ ಸರ್ಕಾರದ ಪ್ರಥಮ ಕೊಡುಗೆ ಬೆಲೆಏರಿಕೆಯ ಕಡೆಗೆ. ಅದರ ಎರಡನೇ ವರ್ಷದ ಬಜೆಟ್ಟಿನಲ್ಲಿ ಸುಮಾರು 500 ಕೋಟಿ ರೂ. ಗಳಷ್ಟು ತೆರಿಗೆಯನ್ನು ಜನಸಾಮಾನ್ಯರ ಮೇಲೆ ಹೇರಲಾಯಿತು. ಮತ್ತು ಎರಡನೇ ವರ್ಷದ ಬಜೆಟ್ಟಿನಲ್ಲೂ 1000 ಕೋಟಿ ರೂ. ಗಳ ಖೋತಾ ತೋರಿಸಲಾಯಿತು.

1979-80ರ ಜನತಾ ಪಕ್ಷದ ಮೂರನೇ ಬಜೆಟ್ಟಿನಲ್ಲೂ 1000 ಕೋಟಿ ರೂ. ಗಳಿಗಿಂತ ಅಧಿಕಖೋತಾವನ್ನು ತೋರಿಸಲಾಯಿತು.

ಇದೆಲ್ಲವರ ಪರಿಣಾಮ ಜನಸಾಮಾನ್ಯರ ನಿತ್ಯಬಳಕೆಯ ವಸ್ತುಗಳಾದ ಕಾಫಿ, ಟೀ, ಸಕ್ಕರೆ, ತರಕಾರಿ, ಎಣ್ಣೆ, ಬೇಳೆಕಾಳು ಮಂತಾದುವುಗಳ ಬೆಲೆ ಏರಿಕೆ.

ಹಣದುಬ್ಬರವು ವಾರ್ಷಿಕ ಶೇ. 20 ರಷ್ಟನ್ನು ಇಂದು ತಲುಪಿದೆ. ತುರ್ತು ಪರಿಸ್ಥಿತಿಯ ಅವಧಿಗೆ ಮುನ್ನಾ ದಿವಸಗಳಲ್ಲಿ ಇದ್ದ ಪರಿಸ್ಥಿತಿಗೇ ಇಂದು ದೇಶ ತಲುಪಿದೆ.

ಜಮೀನ್ದಾರಿಕೆಯನ್ನು ರದ್ದುಗೊಳಿಸಿ ಹೆಚ್ಚುವರಿ ಭೂಮಿಯನ್ನು ಹಂಚುವುದಾಗಿ ಜನತಾಪಕ್ಷದ ಚುನಾವಣಾ ಪ್ರಣಾಳಿಕೆಯು ಜನತೆಗೆ ಭರವಸೆಕೊಟ್ಟಿತ್ತು. ಕಾಂಗ್ರೆಸ್‌ನವರು ತಂದಿದ್ದಂತಹ 'ಮಿತಿ' ಗಳಿಗಿಂತ ಒಂದು ಹೆಜ್ಜೆಯೂ ಮುಂದಕ್ಕೆ ಹೋಗುವುದಿಲ್ಲವೆಂದು ಜನತಾಪಕ್ಷದ ಪ್ರಥಮ ನೀತಿ ಹೇಳಿಕೆಯೇ ತಿಳಿಸಿತು. ಜಮೀನ್ದಾರರು ಮತ್ತು ಅಧಿಕಾರಿಗಳು ತಯಾರು

(6ನೇ ಪುಟನೋಡಿ)

ಶ್ರೀಮಂಗಲದಲ್ಲಿ ಪ್ರಚಂಡ ಮೆರವಣಿಗೆ

ಅಕ್ಟೋಬರ್ ಎರಡರಂದು ದೇಶಾದ್ಯಂತ ಗಾಂಧಿ ಜಯಂತಿಯನ್ನು ಆಚರಿಸಿದ ಸಂದರ್ಭದಲ್ಲಿಕೊಡಗಿನ ಶ್ರೀಮಂಗಲದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಒಂದು ಪ್ರಚಂಡ ಬಹಿರಂಗ ಸಭೆಯನ್ನು ನಡೆಸಿತು. ರಾಷ್ಟ್ರಪಿತ ಗಾಂಧೀಜಿಯವರ ಆದರ್ಶಗಳು ಕಾರ್ಯರೂಪಕ್ಕೆ ತರುತ್ತೇವೆಂದು ಈ ದೇಶವನ್ನು ಮೂವತ್ತೆರಡು ವರ್ಷಗಳಿಂದ ಆಳುತ್ತಿರುದ ಅವರ ಅನುಯಾಯಿಗಳು ಪ್ರತಿವರ್ಷವೂ ಅಕ್ಟೋಬರ್ ಎರಡರಂದು ತಮ್ಮ ಅಗಲಿದ ನಾಯಕನ ಸಮಾಧಿಯ ಬಳಿ ಬಂದು ಪ್ರತಿಜ್ಞೆ ಕೈಗೊಳ್ಳುವ ಇದೇ ಸಂದರ್ಭದಲ್ಲಿ ಶ್ರೀಮಂಗಲದಲ್ಲಿ ಬಹಿರಂಗ ಸಭೆ ನಡೆಸಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಗಾಂಧೀಜಿಯ ತತ್ವಗಳನ್ನು ಈ ದೇಶದಲ್ಲಿ ಕಾರ್ಯರೂಪಕ್ಕೆ ತಂದಿದ್ದಾರೆಯೇ ಎಂದು ಗಾಂಧೀವಾದಿಗಳನ್ನು ಪ್ರಶ್ನಿಸುವ ಮೂಲಕ ಗಾಂಧಿಜಯಂತಿಯನ್ನು ಆಚರಿಸಿತು.

ಅಕ್ಟೋಬರ್ ಎರಡರಂದು 11-30 ಗಂಟೆಗೆ ಎರಡು ದಿಕ್ಕುಗಳಿಂದ ಬಂದ ಎರಡು ಮೆರವಣಿಗೆಗಳು ಶ್ರೀಮಂಗಲ ಟೌನಿನೊಳಗೆ ಪ್ರವೇಶಿಸುವಾಗ ಅಲ್ಲಿನ ಜನಸಮೂಹ ಬೆರಗಾಗಿ ನೋಡುತ್ತಿತ್ತು ಶ್ರೀಮಂಗಲದಿಂದ ಎಂಟುಮೈಲಿ ದೂರವಿರುವ ಕುಟ್ಟದಿಂದ ಮತ್ತು ಐದು ಮೈಲಿ ದೂರವಿರುವ ಟಿ. ಶೆಟ್ಟಿಗೇರಿ ಪ್ರದೇಶಗಳಿಂದ ಕಾಲ್ನಡಿಗೆಯಲ್ಲಿ ಬಂದ ಪ್ಲಾಂಟೇಶನ್ ಕಾರ್ಮಿಕರು, ಕೃಷಿ ಕೂಲಿಗಾರರು, ಹೆಂಗಸರು, ಮಕ್ಕಳು ಕೆಂಬಾವುಟವನ್ನು ಹಿಡಿದು, ಉತ್ಸಾಹ ಭರಿತರಾಗಿ ಘೋಷಣೆಗಳನ್ನು ಕೂಗುತ್ತಾ ಶಿಸ್ತಿನಿಂದ ಪ್ರದರ್ಶನ ನಡೆಸುವುದನ್ನು ಇದೇ ಪ್ರಥಮ ಬಾರಿಗೆ ಕಂಡ ಶ್ರೀಮಂಗಲದ ಜನತೆಗೆ ಇದೊಂದು ಹೊಸ ಅನುಭವವಾಗಿತ್ತು.

ಬಹಿರಂಗ ಸಭೆಯ ಮುಖ್ಯ ಭಾಷಣಕಾರರಾಗಿ ಬಂದಿದ್ದ ರಾಜ್ಯ ರೈತ ಸಂಘದ ಮುಖಂಡರಾದ ಕಾಂ. ಜಗನ್ನಾಥ್‌ರವರು ದೇಶದ ಇಂದಿನ ರಾಜಕೀಯ ಹಾಗೂ ಸಾಮಾಜಿಕ ಪರಿಸ್ಥಿತಿಯ ಬಗ್ಗೆ ಮಾತನಾಡುತ್ತಾ, ದೇಶದ ಇಂದಿನ ಸ್ಥಿತಿಗೆ ರೈತ ಕಾರ್ಮಿಕ ವರ್ಗ ರಾಜಕೀಯ ಪ್ರಜ್ಞೆಯನ್ನು ಬೆಳೆಸಿಕೊಂಡು ಸಂಘಟಿತರಾಗಿ ಚಳುವಳಿ ನಡೆಸಲು ಅಸಮರ್ಥರಾಗಿರುವುದೇ ಕಾರಣವೆಂದು ಹೇಳಿದರು. ಬಂಡವಾಳಶಾಹೀ ವರ್ಗ ತನ್ನ ರಕ್ಷಣೆಗಾಗಿ ನೇಮಿಸಿಕೊಂಡಿರುವ ಪೋಲೀಸರೂ ಸಹ ಕಾರ್ಮಿಕ ವರ್ಗದಿಂದ ಬಂದವರೇ ಆಗಿರುವುದರಿಂದ ಕಾರ್ಮಿಕ ಚಳುವಳಿಯನ್ನು ಮುರಿಯಲು ಪೋಲೀಸರು ಪ್ರಯತ್ನಿಸಬಾರದೆಂದು ಕೇಳಿಕೊಂಡರು.

ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ನಿನ (ಸಿ. ಐ. ಟಿ. ಯು.) ಕಾರ್ಯದರ್ಶಿಯಾದ ಕಾಂ. ಅಸ್ರಣ್ಣನವರು ಮಾತನಾಡುತ್ತಾ – ಕಾನೂನು ಪ್ರಕಾರ ಕಾರ್ಮಿಕರಿಗೆ ದೊರೆಯಬೇಕಾದ ಸೌಲಭ್ಯಗಳನ್ನು ನೀಡಲು ನಿರಾಕರಿಸುವ ಮಾಲೀಕರ ಮೇಲೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದೂ ಮತ್ತು ಪೋಲೀಸರು ಕಾರ್ಮಿಕರ ಹೋರಾಟಗಳಲ್ಲಿ ಮಧ್ಯಪ್ರವೇಶ ಮಾಡುವುದನ್ನು ನಿಲ್ಲಿಸಬೇಕೆಂದೂ ಮನವಿ ಮಾಡಿಕೊಂಡರು.

ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ನಿನ (ಸಿ.ಐ.ಟಿ.ಯು) ಸಹಕಾರ್ಯದರ್ಶಿ ಕಾಂ. ಕುಟ್ಟಪ್ಪನ್ ಅವರು ಮಲೆಯಾಳಂನಲ್ಲಿ ಮಾಡಿದ ಭಾಷಣದಲ್ಲಿ ಕೊಡಗಿನ ಸರ್ಕಾರೀ ಭೂಮಿಯಲ್ಲಿ ವಾಸಿಸುತ್ತಿರುವ ಭೂಹೀನ ರೈತರನ್ನು ಸರ್ಕಾರ ಅಮಾನುಷವಾಗಿ ಒಕ್ಕಲೆಬ್ಬಿಸುತ್ತಿರುವ ಘಟನೆಗಳು ಹೆಚ್ಚುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿ ಇದರ ವಿರುದ್ಧ ಪೈಸಾರಿ ಭೂಮಿಗಳಲ್ಲಿ ವಾಸಿಸುತ್ತಿರುವ ರೈತರು ಸಂಘಟಿತರಾಗಿ ಸಂಯುಕ್ತ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ನಿನ ಸಹಕಾರ್ಯದರ್ಶಿಯಾದ ಕಾಂ. ಉದಯಕುಮಾರ್ ಅವರು ಮಾತನಾಡುತ್ತಾ- ರಾಜ್ಯದ ಯಾವುದೇ ಪ್ರದೇಶದಲ್ಲಿ ಕಾರ್ಮಿಕ ವರ್ಗ ಹೋರಾಟ ನಡೆಸಿದರೂ ಆ ಹೋರಾಟಕ್ಕೆ ಇತರ ಪ್ರದೇಶಗಳಲ್ಲಿರುವ ಕಾರ್ಮಿಕರು ಸಂಪೂರ್ಣ ಬೆಂಬಲ ನೀಡಬೇಕೆಂದೂ ಆಗ ಮಾತ್ರ ಸರ್ಕಾರ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುವ ಪರಿಸ್ಥಿತಿ ಉಂಟಾಗುತ್ತದೆಯೆಂದು ಹೇಳಿ ಬೆಂಗಳೂರಿನ ತಾತಗುಣಿ ಎಸ್ಟೇಟಿನಲ್ಲಿ ಕಳೆದ 3 ತಿಂಗಳಿಂದ ಹೋರಾಟ ನಡೆಸುತ್ತಿದ್ದ ಹರಿಜನ ಕಾರ್ಮಿಕರನ್ನು ಪೋಲೀಸಿನವರು ಬಂಧಿಸಿದ್ದನ್ನು ಖಂಡಿಸಿ, ಸರ್ಕಾರ ಕೂಡಲೇ ಈ ಬಗ್ಗೆ ಗಮನ ಹರಿಸದಿದ್ದಲ್ಲಿ ರಾಜ್ಯವ್ಯಾಪೀ ಚಳುವಳಿ ನಡೆಸಬೇಕಾಗುತ್ತದೆಂದು ಎಚ್ಚರಿಸಿ ಈ ಹೋರಾಟಕ್ಕೆ ಕೊಡಗು ಜಿಲ್ಲೆಯ ಕಾರ್ಮಿಕ ವರ್ಗದ ಬೆಂಬಲವನ್ನು ಸೂಚಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ನಿನ (ಸಿ. ಐ. ಟಿ. ಯು.) ಅಧ್ಯಕ್ಷರಾದ ಕಾಂ. ಕೆ. ಎ. ಮುತ್ತಪ್ಪನವರು ಮಾತನಾಡುತ್ತಾ ದೇಶದಲ್ಲಿ ಸಿ. ಪಿ. ಐ. (ಎಂ) ಒಂದು ಬಲಿಷ್ಠ ಕಾರ್ಮಿಕ ವರ್ಗದ ಪಕ್ಷವಾಗಿ ಬೆಳೆಯುತ್ತಿರುವುದನ್ನು ಉದಾಹರಣೆಗಳ ಸಹಿತ ವಿವರಿಸಿ ಕರ್ನಾಟಕದಲ್ಲೂ ಸಹ ನಮ್ಮ ಪಕ್ಷವನ್ನು ಬಲಿಷ್ಠಗೊಳಿಸಲು ದುಡಿಯುವ ವರ್ಗದ ಎಲ್ಲ ವಿಭಾಗದ ಜನತೆ ಹೋರಾಟಕ್ಕೆ ಸಿದ್ಧರಾಗಬೇಕೆಂದು ಕರೆ ನೀಡಿದರು.

ಕುಟ್ಟದ ಸಿ. ಪಿ. ಐ. (ಎಂ) ಹಿತೈಷಿಗಳಾದ ಕಾಂ. ಮುತ್ತು ಅವರು ವಂದನಾರ್ಪಣೆ ಮಾಡಿದರು.

ಂ

ವಿರಾಜಪೇಟೆ ಸುತ್ತಮುತ್ತ ಒಕ್ಕಲೆಬ್ಬಿಸುವಿಕೆ : ಪ್ರತಿಭಟನೆಗೆ ಕರೆ

ದಿನ ಬೆಳಗಾದರೆ ಬಡರೈತರ ಉದ್ಧಾರದ ಬಗ್ಗೆ, ಹರಿಜನ ಗಿರಿಜನರ ಉದ್ಧಾರದ ಬಗ್ಗೆ ದೊಡ್ಡ ದೊಡ್ಡ ಹೇಳಿಕೆಗಳನ್ನು ಕೊಡುತ್ತಿರುವ ಸರ್ಕಾರ ಕಾರ್ಯತಃ ಇವರನ್ನು ರಕ್ಷಿಸುವಲ್ಲಿ, ಇವರ ಜೀವನ ಮಟ್ಟವನ್ನು ಸುಧಾರಿಸುವಲ್ಲಿ ಯಾವ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂಬುದನ್ನು ಆಲೋಚಿಸಿದರೆ ಬಡರೈತರ ಜೀವನ ಮಟ್ಟವನ್ನು ಸುಧಾರಿಸುವ ಮಾತಿರಲಿ ಅವರನ್ನು ಅವರ ಪಾಡಿಗೆ ಜೀವಿಸುವುದಕ್ಕೂ ಸಹ ಬಿಡದೆ ಅವರನ್ನು ಪೋಲೀಸರ ಸಹಾಯದಿಂದ ಒಕ್ಕಲೆಬ್ಬಿಸುತ್ತಿದ್ದಾರೆಂಬ ಸಂಗತಿ ಸರ್ಕಾರದ ಮಾತಿಗೂ ಕೃತಿಗೂ ಇರುವ ಬಹು ದೊಡ್ಡ ಅಂತರವನ್ನು ಸ್ಪಷ್ಟವಾಗಿ ತೋರಿಸಿಕೊಡುತ್ತದೆ. ಇತ್ತೀಚೆಗೆ ಕೊಡಗಿನಲ್ಲಿ ಒಕ್ಕಲೆಬ್ಬಿಸುವ ಘಟನೆಗಳು ಹೆಚ್ಚತೊಡಗಿದೆ.

ಕುಟ್ಟದಲ್ಲಿರುವ ಬೆಟ್ಟದಾಡಿ ಎಂಬಲ್ಲಿ ಸುಮಾರು ಎರಡು-ಮೂರು ವರ್ಷಗಳಿಂದ 16 ಕುಟುಂಬಗಳು ಸರ್ಕಾರಿ ಭೂಮಿಯಲ್ಲಿ ಮನೆಕಟ್ಟಿಕೊಂಡು ವಾಸವಾಗಿದ್ದರು. ದಿನಾಂಕ 22-9-79 ರಂದು ಅರಣ್ಯ ಇಲಾಖೆಯವರೂ ಮತ್ತು ಪೋಲೀಸರೂ ಐದು ಮನೆಗಳನ್ನು ನಾಶಮಾಡಿ, ಈ ಸ್ಥಳವನ್ನು ಬಿಟ್ಟುಹೋಗಬೇಕೆಂದು ಹೆದರಿಸಿ ಹೋಗಿದ್ದಾರೆ. ಈಗ ಆ 5 ಕುಟುಂಬಗಳೂ ಮನೆಯಿಲ್ಲದೆ ಬೀದಿ ಪಾಲಾಗಿದ್ದಾರೆ. ದಿನಾಂಕ 26-9-79ರಂದು ಈ ಕುಟುಂಬದವರಿಗೆ ಒಂದು ವಾರದೊಳಗೆ ಆ ಸ್ಥಳದಿಂದ ಹೋಗುವಂತೆ ತಿಳಿಸಿ ನೋಟೀಸ್ ಜಾರಿಮಾಡಿದ್ದಾರೆ.

ಇದೇ ರೀತಿಯಲ್ಲಿ ವಿರಾಜಪೇಟೆಗೆ ಸಮೀಪದ ಗ್ರಾಮದಲ್ಲಿ ಸರ್ಕಾರಿ ಜಮೀನಿನಲ್ಲಿ ಮನೆ ಕಟ್ಟಿಕೊಂಡಿದ್ದ ಪಿ.ಕೆ. ಮೊಹಮದ್ ಮತ್ತು ಹರಿಜನ ಬಟ್ಟು ಎಂಬುವರು ಹತ್ತಾರು ತಿಂಗಳಿಂದ ಬೆವರು ಸುರಿಸಿ ಬೆಳೆಸಿದ ಬೆಳೆಗಳನ್ನು ಹಾಳುಮಾಡಿದಷ್ಟೇ ಅಲ್ಲದೆ, ವಾಸಿಸುತ್ತಿದ್ದ ಮನೆಯನ್ನು ಒಳಗಿದ್ದ ಪದಾರ್ಥಗಳ ಸಹಿತ ಸಂಪೂರ್ಣವಾಗಿ ಸುಟ್ಟು ಬೂದಿ ಮಾಡಿದ್ದಾರೆ. ಇದರಿಂದ ಸುಮಾರು 14 ಸಾವಿರ ರೂಪಾಯಿಗಳಷ್ಟು ನಷ್ಟವಾಗಿದೆ.

ದೇಶದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಬೇಕೆಂದು ಘೋಷಣೆ ನೀಡುವ ಸರ್ಕಾರ ಸಂಪತ್ತನ್ನು ರಕ್ಷಿಸುವ ರೀತಿ ಹೀಗಿದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವಿರಾಜಪೇಟೆ ಶಾಖೆ ಸರ್ಕಾರದ ಈ ಒಕ್ಕಲೆಬ್ಬಿಸುವ ಜನವಿರೋಧಿ ನೀತಿಯನ್ನು ತೀವ್ರವಾಗಿ ಖಂಡಿಸಿ ಇದರ ವಿರುದ್ಧ ಇಡೀ ಜಿಲ್ಲೆಯ ಬಡರೈತರು ಹರಿಜನ-ಗಿರಿಜನರು, ಒಗ್ಗಟ್ಟಾಗಿ ಸರ್ಕಾರದ ಈ ನೀತಿಯ ವಿರುದ್ಧ ತೀವ್ರ ರೀತಿಯ ಚಳುವಳಿಯನ್ನು ಪ್ರಾರಂಭಿಸಬೇಕೆಂದು ಕರೆ ನೀಡುತ್ತದೆ ಮತ್ತು ಈ ಚಳುವಳಿಗೆ ಎಲ್ಲಾ ಪ್ರಗತಿಪರ-ಪ್ರಜಾಸತ್ತಾತ್ಮಕ ಶಕ್ತಿಗಳೂ ಬೆಂಬಲ ನೀಡಬೇಕೆಂದು ವಿನಂತಿಸಿಕೊಳ್ಳುತ್ತದೆ.

ಂ

ಚುನಾವಣಾಪ್ರಣಾಳಿಕೆ

[5ನೇ ಪುಟದಿಂದ]

ಮಾಡಿದ್ದಂತಹ ಹೆಚ್ಚುವರಿ ಭೂಮಿಯ ಅಂದಾಜು ಲೆಕ್ಕಾಚಾರವನ್ನು ಜನತಾ ಸರ್ಕಾರದವರೂ ಒಪ್ಪಿಕೊಂಡರು. ಕಾಂಗ್ರೆಸ್‌ನವರು ಜಪಿಸುತ್ತಿದ್ದ ಮಂತ್ರಗಳನ್ನೇ ಜನತಾದವರೂ ಜಪಿಸಲಾರಂಭಿಸಿದರು.

ಇದನ್ನು ಹೋಲಿಕೆ ಮಾಡಿ ನೋಡಿದಾಗ, ಪ. ಬಂಗಾಳ ರಾಜ್ಯದಲ್ಲಿ ಸಿ. ಪಿ. ಐ. (ಎಂ) ನೇತೃತ್ವದ ಸರ್ಕಾರವು ರೈತರಿಗೆ ಬಹಳಷ್ಟು ಕೆಲಸಮಾಡಿದೆ, ಈ ದೇಶದ ರಾಜ್ಯಾಂಗದ ಚೌಕಟ್ಟಿನೊಳಗೆ ಎಷ್ಟು ಪರಿಹಾರವನ್ನು ಗೇಣಿದಾರರಿಗೆ ಕೊಡಬಹುದೋ ಅಷ್ಟೂ ಪರಿಹಾರವನ್ನು ಎಡರಂಗ ಸರ್ಕಾರವು ಕೊಟ್ಟಿದೆ. ಅಲ್ಲಿನ ಜಮೀನ್ದಾರರ ಪ್ರತಿಭಟನೆಯನ್ನು ಸಿ. ಪಿ. ಐ. (ಎಂ) ನೇತೃತ್ವದ ಸರ್ಕಾರ ಲೆಕ್ಕಿಸಲಿಲ್ಲ. ಪ. ಬಂಗಾಳದ ಸರ್ಕಾರ ಸಾಧಿಸಿದ್ದನ್ನು ಜನತಾ ಸರ್ಕಾರ ಏಕೆ ಸಾಧಿಸಲಿಲ್ಲ? ಕಾರಣ ಸ್ಪಷ್ಟ. ಅದೆಂದರೆ, ಜನತಾಪಕ್ಷವನ್ನು ಹಿಡಿತದಲ್ಲಿ ಇಟ್ಟುಕೊಂಡಿರುವ ಜಮೀನುದಾರರ ಒಂದು ದೊಡ್ಡ ಗುಂಪೇ ಜನತಾಪಕ್ಷದಲ್ಲಿದೆ.

ಜನ ವಿಭಾಗಗಳಿಗೆ ತಾನು ನೀಡಿದ್ದ ಭರವಸೆಯನ್ನೂ ಜನತಾಪಕ್ಷ ಮುರಿದಿದೆ. ಬೋನಸ್ ಎಂಬುದು ಒಂದು ತಡೆಹಿಡಿದ ವೇತನ ಎಂಬುದನ್ನು ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಒಪ್ಪಿಕೊಂಡಿದ್ದ ಜನತಾ ಪಕ್ಷವು ರೈಲ್ವೆ ನೌಕರರಿಗೆ ಮತ್ತು ಕೇಂದ್ರ ಸರ್ಕಾರದ, ರಾಜ್ಯ ಸರ್ಕಾರಗಳ ಇತರೆ ನೌಕರರಿಗೆ ಬೋನಸ್ ಕೊಡಲು ನಿರಾಕರಿಸಿತು.

ಭೂತಲಿಂಗಮ್ ಸಮಿತಿಯನ್ನು ನೇಮಿಸಿ ಒಂದು ಪ್ರತಿಗಾಮಿ ವೇತನ ಮತ್ತು ಆದಾಯ ನೀತಿಯನ್ನು ಜನತಾ ಸರ್ಕಾರವು ದುಡಿಯುವ ಜನತೆಯ ಮೇಲೆ ಹೇರಿತು. ಇದು ತನ್ನ ಚುನಾವಣಾ ಪ್ರಣಾಳಿಕೆಯ ಭರವಸೆಗೆ ವಿರುದ್ಧವಾದುದಾಗಿದೆ.

ಎಲ್. ಐ. ಸಿ. ನೌಕರರ ಬೋನಸ್ ಗಳಿಕೆಯ ಮೇಲೂ ಅದು ಧಾಳಿ ಮಾಡಿತು. ಕಾಂಗ್ರೆಸ್ ಸರ್ಕಾರದವರು ಹೇಳುತ್ತಿದ್ದಂತೆ ಜನತಾ ಸರ್ಕಾರದವರೂ ಸಹ ಎಲ್. ಐ. ಸಿ. ನೌಕರರನ್ನು ಹೆಚ್ಚು ವೇತನ ಪಡೆಯುವವರು ಎಂದು ಕರೆಯಲಾರಂಭಿಸಿತು.

ಸಾರ್ವಜನಿಕ ಉದ್ಯಮಗಳಲ್ಲಿ ಸಹ ವೇತನ ಸ್ಥಗಿತವನ್ನು ತರಲು ಜನತಾ ಸರ್ಕಾರ ಯೋಚಿಸಿತು. ನೌಕರರ ತುಟ್ಟಿಭತ್ಯ ಕಡಿತಗೊಳಿಸಲೂ ಅದು ಪ್ರಯತ್ನಿಸಿತು.

ಜನತಾಪಕ್ಷ ನಡೆಸುತ್ತಿದ್ದ ರಾಜ್ಯ ಸರ್ಕಾರಗಳಲ್ಲಿ ಆ ರಾಜ್ಯಗಳ ಸರ್ಕಾರಿ ನೌಕರರ ಮುಷ್ಕರಗಳನ್ನು ಹತ್ತಿಕ್ಕಲು ಬರ್ಬರ ಶಿಕ್ಷೆಗಳನ್ನು ಜಾರಿಗೆ ತರಲು ಪ್ರಯತ್ನಿಸಲಾಯಿತು. ರಿಸರ್ವ್‌ಬ್ಯಾಂಕ್ ನೌಕರರ ಮುಷ್ಕರವನ್ನು ಮುರಿಯಲು ಜನತಾ ಸರ್ಕಾರವು ಸುಗ್ರೀವಾಜ್ಞೆಯೊಂದನ್ನು ಜಾರಿಗೆ ತಂದಿತು. ದುಡಿಯುವ ಜನತೆಗೆ ಮರಳಿ ಕೊಡಬೇಕಿದ್ದ ಕಡ್ಡಾಯ ಠೇವಣಾತಿಯನ್ನು ಕೊಡದೆ ಮುಂದಕ್ಕೆ ಹಾಕಿತು.

ಕೈಗಾರಿಕಾ ಬಾಂಧವ್ಯ ಎಂಬ ಕುಖ್ಯಾತ ಶಾಸನವನ್ನು ಜನತಾ ಸರ್ಕಾರ ಮಂಡಿಸಿತು. ಟ್ರೇಡ್ ಯೂನಿಯನ್ ಸಂಘಟನೆಗಳಿಂದ ಪ್ರಬಲ ಪ್ರತಿಭಟನೆ ಬಂದರೂ ತನ್ನ ಕುಖ್ಯಾತ ಕೈಗಾರಿಕಾ ಬಾಂಧವ್ಯ ಶಾಸನವನ್ನು ಅದು ವಾಪಸು ಪಡೆಯಲಿಲ್ಲ. ಜನತಾಪಕ್ಷದ ಸರ್ಕಾರಗಳು ಇದ್ದ ರಾಜ್ಯಗಳಲ್ಲಿ ಮುಷ್ಕರಗಳನ್ನು ನಿರ್ಬಂಧಿಸಲಾಯಿತು. ಲಾಕೌಟುಗಳು ಹೆಚ್ಚಾದವು. ಕಾರ್ಮಿಕರನ್ನು ಬಗ್ಗು ಬಡಿಯಲು ಆಡಳಿತ ವರ್ಗಗಳಿಗೆ ಸರ್ವ ಸಹಾಯವನ್ನೂ ಸರ್ಕಾರ ಮಾಡಿತು.

ಜನತಾ ಸರ್ಕಾರದಡಿ ದೊಡ್ಡ ವ್ಯಾಪಾರಿಗಳು ಜನರನ್ನು ಲೂಟಿಗೈಯ್ಯಲು ಆರಂಭಿಸಿದರು. ಅಗತ್ಯ ವಸ್ತುಗಳ ವ್ಯಾಪಾರವನ್ನು ರಾಷ್ಟ್ರೀಕರಣ ಮಾಡಿದ್ದಾಗಿದ್ದರೆ ಜನತೆಗೆ ಸ್ವಲ್ಪವಾದರೂ ಪರಿಹಾರ ಕೊಡಬಹುದಿತ್ತು. ಆದರೆ ಜನತಾ ಸರ್ಕಾರ ಹಾಗೆ ಮಾಡಲಿಲ್ಲ.

ಯೋಜನೆ :

ಆವರ್ತ ಯೋಜನೆಯ ಹೆಸರಿನಲ್ಲಿ ಜನತಾ ಸರ್ಕಾರವು ದೇಶದ ಯೋಜನಾಬದ್ಧ ಬೆಳವಣಿಗೆಯನ್ನೇ ಹಾಳುಮಾಡಿತು.

ರೈತರ ಚಳುವಳಿಯನ್ನು ಮುನ್ನಡೆಸಲು ರೈತ ಸಂಘದ ನಿರ್ಧಾರ

ದ. ಕ. ಜಿಲ್ಲಾ ರೈತ ಸಂಘದ ಸಭೆಯು ತಾ. 6-10-79 ರಂದು ಮಂಗಳೂರಿನಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಅಬ್ರಹಾಂ ಕರ್ಕಡ ವಹಿಸಿದ್ದರು. ಕಾರ್ಯದರ್ಶಿ ಕಾಂ. ಯು. ಜನಾರ್ಧನ ನಾಯಕರು ಜಿಲ್ಲೆಯಲ್ಲಿ ರೈತಸಂಘದ ಚಟುವಟಿಕೆಗಳ ಬಗ್ಗೆ ವರದಿ ಮಂಡಿಸಿದರು. ವರದಿಯ ಮೇಲಿನ ಚರ್ಚೆಯಲ್ಲಿ ಕುಂದಾಪುರದ ಕೆ. ಶಂಕರ್ ಉಡುಪಿಯ ಡೇವಿಡ್ ಕರ್ಕಡ, ಬೆಳ್ತಂಗಡಿಯ ಕೆ. ವಿ. ರಾವ್, ಸುಳ್ಯದ ಮೋನಪ್ಪಗೌಡ, ಪುತ್ತೂರಿನ ವಿಷ್ಣುಮೂರ್ತಿ ಮೊದಲಾದವರು ಭಾಗವಹಿಸಿದ್ದರು.

ಕರ್ನಾಟಕ ಪ್ರಾಂತ ರೈತಸಂಘದ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾಯರು ರೈತಚಳುವಳಿಯನ್ನು ಮುನ್ನಡೆಸಲು ರಾಜ್ಯ ರೈತಸಂಘವು ಇತ್ತೀಚೆಗೆ ಸಭೆ ಸೇರಿ ಕೈಗೊಂಡಿರುವ ನಿರ್ಣಯಗಳನ್ನು ಸಭೆಗೆ ತಿಳಿಸಿದರು. ಪರಿಹಾರವಿಲ್ಲದೆ ಭೂ ಒಡೆತನ, ನೆರೆಪೀಡಿತರಿಗೆ ನೀಡಿರುವ ಸಾಲಗಳ ರದ್ದತಿ, ಮಿಗತೆ ಹಾಗೂ ಬಂಜರು ಭೂಮಿಯನ್ನು ಬಡರೈತರಿಗೆ ಮತ್ತು ಭೂಹೀನರಿಗೆ ಹಂಚುವುದು, ಮಳೆಬಾರದೆ ಬೆಳೆಗಳಿಗೆ ಹಾನಿಯಾಗಿರುವುದರಿಂದ ಕಂದಾಯ ಮತ್ತು ಲೆವಿಯನ್ನು ಮಾಫಿ ಮಾಡುವಂತೆ, ಹಾಗೂ ಭೂನ್ಯಾಯಮಂಡಳಿಗಳಲ್ಲಿ ಗೇಣಿದಾರರಿಗೆ ಆಗುತ್ತಿರುವ ಅನ್ಯಾಯಗಳನ್ನು ತಡೆಗಟ್ಟಲು, ಭೂನ್ಯಾಯಮಂಡಳಿಗಳಲ್ಲಿ ರೈತರ ಪ್ರತಿನಿಧಿಗಳಿಗೆ ಪ್ರಾತಿನಿಧ್ಯ ಹಾಗೂ ರೈತರಿಗೆ ಬೆಲ್ಲ ತಯಾರಿಸಲು ಅನುಮತಿ ನೀಡಲು ನವೆಂಬರ್ ತಿಂಗಳ 21ರಂದು ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ರೈತರ ಪ್ರದರ್ಶನ ನಡೆಸಬೇಕೆಂದು ತೀರ್ಮಾನಿಸಲಾಯಿತು.

ಬೆಂಗಳೂರಿನಲ್ಲಿ ನಡೆಯುವ ಅಖಿಲ ಭಾರತ ಕಿಸಾನ್ ಸಭೆಯ ಕೇಂದ್ರ ಕೌನ್ಸಿಲ್ ಸಭೆಯನ್ನು ಯಶಸ್ವಿಗೊಳಿಸಲು ಸಹಕರಿಸಬೇಕೆಂದು ನಿರ್ಧರಿಸಲಾಯಿತು. ದ. ಕ. ಜಿಲ್ಲಾ ರೈತಸಂಘದ ಸಮ್ಮೇಳನವನ್ನು ಮುಂದಿನ ಫೆಬ್ರವರಿ ತಿಂಗಳಿನಲ್ಲಿ ನಡೆಸಲು ಸಹಾ ಸಭೆ ಒಪ್ಪಿಗೆ ನೀಡಿತು.

○

ಸರ್ವಾಧಿಕಾರಿ – ಕೋಮುವಾದಿಗಳ ವಿರುದ್ಧ ಚಿಕ್ಕಮಗಳೂರಿನಲ್ಲಿ ಸಭೆ

ದೇಶವನ್ನು ಬಾಧಿಸುತ್ತಿರುವ ಎರಡು ಅನಿಷ್ಟಗಳಾದ ಸರ್ವಾಧಿಕಾರಿ ಮತ್ತು ಕೋಮುವಾದಿ ಶಕ್ತಿಗಳನ್ನು ವಿರೋಧಿಸಿ ಚಿಕ್ಕಮಗಳೂರಿನಲ್ಲಿ ಇತ್ತೀಚೆಗೆ ಒಂದು ಬಹಿರಂಗ ಸಭೆ ನಡೆಯಿತು.

ವಿದ್ಯಾರ್ಥಿ ಯುವಜನ ಕ್ರಿಯಾ ಸಮಿತಿಯು ಏರ್ಪಡಿಸಿದ್ದ ಈ ಸಭೆಯಲ್ಲಿ ಎಸ್. ಎಫ್. ಐ, ಎ. ಐ. ಎಸ್. ಎಫ್, ಎ. ಐ. ವೈ. ಎಫ್. ಮತ್ತು ದಲಿತ ಸಂಘರ್ಷ ಸಮಿತಿಯ ಸದಸ್ಯರು ಮತ್ತು ಕಾರ್ಯಕರ್ತರು ಅಪಾರ ಸಂಖ್ಯೆಯಲ್ಲಿ ಸೇರಿದ್ದರು.

ಯುವಜನರನ್ನು ಉದ್ದೇಶಿಸಿ ಮಾತನಾಡಿದ ಎಸ್. ಎಫ್. ಐ. ನಾಯಕ ಕಾಂ. ಮೆಲ್ಕಿಯೋರ್ ಅವರು ಸರ್ವಾಧಿಕಾರಿ-ಕೋಮುವಾದಿಶಕ್ತಿಗಳ ಅಪಾಯದ ಕುರಿತು ಎಚ್ಚರಿಕೆ ನೀಡಿದರು.

ಆರ್. ಎಸ್. ಎಸ್. ಅಪಾಯದ ಕುರಿತು ಎ. ಐ. ವೈ. ಎಫ್. ನ ಕಾಂ. ಬಿ. ಕೆ. ಸುಂದರೇಶ್ ಮಾತನಾಡಿ ಸರ್ವಾಧಿಕಾರಿ, ಕೋಮುಶಕ್ತಿಗಳನ್ನು ಸೋಲಿಸಲು ಯುವಜನರು ಕಾರ್ಯೋನ್ಮುಖರಾಗಬೇಕೆಂದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಕಾಂ. ಬಿ. ಎಲ್. ತೋಡಿನ್ನಾಯ್ ಅವರು ಮಾತನಾಡಿ ಸ್ವಾತಂತ್ರ ಸಿಕ್ಕಿ ಮೂರು ದಶಕಗಳು ಕಳೆದರೂ ದೇಶದ ಯುವಜನರು ಜಾತೀಯತೆಯಿಂದ ಮುಕ್ತರಾಗಿಲ್ಲದಿರುವುದಕ್ಕೆ ವಿಷಾಧಿಸಿದರು.

ಸ್ಥಳೀಯ ಸಿ. ಪಿ. ಐ. (ಎಂ) ನಾಯಕ ಕಾಂ. ಕೆ. ರಾಮದಾಸ್ ಅವರು ಸಭೆಯಲ್ಲಿಮಾತನಾಡಿ ಜನತೆಯ ಮೂಲಭೂತ ಅಗತ್ಯಗಳನ್ನು ಈಡೇರಿಸಲು ವಿಫಲವಾದ ಕಾಂಗ್ರೆಸ್ ಹಾಗೂ ಜನತಾ ಸರ್ಕಾರಗಳನ್ನು ಖಂಡಿಸಿದರು. ಬರಲಿರುವ ಲೋಕಸಭಾ ಚುನಾವಣೆಗಳಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಗೆಲ್ಲಿಸಲು ಯುವಜನರು ಉತ್ಸಾಹದಿಂದ ಶ್ರಮಿಸಬೇಕೆಂದು ಅವರು ಹೇಳಿದರು.

ಎ. ಐ. ಎಸ್. ಎಫ್. ನ ಕಾಂ. ನಾಣಯ್ಯ ವಂದಿಸಿದರು. ○

ಬಸ್ರೂರು ಸಹಕಾರಿ ಸಂಘದ ವಾರ್ಷಿಕ ಸಭೆ

ದಕ್ಷಿಣ ಕನ್ನಡ ಜಿಲ್ಲೆಯ ಬಸ್ರೂರು ವ್ಯವಸಾಯ ಸೇವಾ ಸಹಕಾರಿ ಸಂಘದ ವಾರ್ಷಿಕ ಮಹಾಸಭೆಯು ಇತ್ತೀಚೆಗೆ ಜರುಗಿತು. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಬಿ. ಅಪ್ಪಣ್ಣಹೆಗ್ಡೆ ವಹಿಸಿದ್ದರು.

78-79ನೇ ವರ್ಷದ ಆಡಳಿತ ವರದಿ ಮತ್ತು 79-80ನೇ ವರ್ಷದ ಅಭಿವೃದ್ಧಿ ಕಾರ್ಯಕ್ರಮದ ಬಗ್ಗೆ ಸಂಘದ ಕಾರ್ಯದರ್ಶಿ ಎಂ. ವೆಂಕಟರಮಣ ಭಟ್ ಕೊಟ್ಟ ವರದಿಗೆ ಸಭೆ ಅನುಮತಿ ಸೂಚಿಸಿತು.

ಆಡಳಿತ ಮಂಡಳಿಗೆ ಎರಡು ವರ್ಷಕ್ಕೊಮ್ಮೆ ಚುನಾವಣೆ ನಡೆಸುವುದಾಗಿ ತಿದ್ದುಪಡಿ ಮಾಡಿದ್ದರಿಂದ 79-80ನೇ ಸಾಲಿಗೂ ಈಗಿನ ಪದಾಧಿಕಾರಿಗಳೇ ಮುಂದುವರೆಯುತ್ತಾರೆ.

●

ಕೆನರ ಸಹಕಾರಿ ಸಂಘ : ಎಲ್ಲ ಸ್ಥಾನ ಸಿ.ಐ.ಟಿ.ಯು. ಗೆ

ಮಂಗಳೂರಿನಲ್ಲಿರುವ ಕೆನರ ವರ್ಕ್‌ಶಾಪಿನ ಕೆಲಸಗಾರರ ಸಹಕಾರಿ ಸಂಘಕ್ಕೆ ಸಿ.ಐ.ಟಿ.ಯು. ಉಮೇದುವಾರರಾದ ಕೆ. ಸದಾನಂದ, ಸಿ. ನಾರಾಯಣ, ಅಪ್ಪುಕುಟ್ಟನ್ ಪಿಳ್ಳೈ, ಕೆ. ಶಂಕರ್, ಬಿ. ಬಾಬು, ಜೆ. ಸಂಜೀವ ಶೆಟ್ಟಿ ಮತ್ತು ಲಿಂಗಪ್ಪಪೂಜಾರಿ ಅವರು ಡೈರೆಕ್ಟರುಗಳ ಸ್ಥಾನಕ್ಕೆ ಪ್ರಚಂಡ ಬಹುಮತದಿಂದ ಆಯ್ಕೆಯಾಗಿದ್ದಾರೆ.

ಸಂಘದ ಏಳು ಮಂದಿ ಡೈರೆಕ್ಟರ್‌ಗಳ ಸ್ಥಾನಕ್ಕೆ 23 ಮಂದಿ ಸ್ಪರ್ಧಿಸಿದ್ದು ಏಳೂ ಸ್ಥಾನವನ್ನು ಸಿ.ಐ.ಟಿ.ಯು. ಉಮೇದುವಾರರು ಗಳಿಸಿದ್ದಾರೆ.

ಸಹಕಾರಿ ಸಂಘವು 78-79ನೇ ಸಾಲಿನಲ್ಲಿ ತನ್ನ ಸದಸ್ಯರಿಗೆ ಶೇ 9.5 ರಷ್ಟು ಡಿವಿಡೆಂಡ್ ಹಂಚುವುದೆಂದು ಸಂಘದ ಪ್ರಕಟಣೆ ತಿಳಿಸಿದೆ.

ಸಂಘದ ವಾರ್ಷಿಕ ಮಹಾಸಭೆಯು ಸೆ. 29ರಂದು ಕೆನರ ಲೈಬ್ರರಿ ಸದನದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಎಸ್. ವಿ. ಕುಡ್ವ ವಹಿಸಿದ್ದರು ಸಂಘದ 78-79ರ ವರದಿಯನ್ನು ಕಾರ್ಯದರ್ಶಿ ಸಿ. ನಾರಾಯಣ ಅವರು ಮಂಡಿಸಿದರು. 78-79ರ ಆಡಿಟ್ ವರದಿ ಮತ್ತು 79-80ರ ಅಂದಾಜು ಬಡ್ಜೆಟ್ ಅನ್ನು ಕಾರ್ಯದರ್ಶಿಗಳು ಮಂಡಿಸಿದ ನಂತರ ದೀರ್ಘ ಚರ್ಚೆಯಾಗಿ ಕೊನೆಗೆ ಸಭೆ ಮಂಜೂರಾತಿ ನೀಡಿತು. ಸಿ. ನಾರಾಯಣ ವಂದಿಸಿದರು.

○

ಪುತ್ತೂರಿನಲ್ಲಿ ಹರಿಜನ ಬಾಲಕನ ಬಂಧನ: ಪೋಲೀಸ್ ಪೆಟ್ಟು

ದಕ್ಷಿಣ ಕನ್ನಡದ ಪುತ್ತೂರು ಪಟ್ಟಣದ ಕೊರಗನವರ ಮಗ 14ರ ಪ್ರಾಯದ ಸುಂದರ್ ಎಂಬ ಹರಿಜನ ಬಾಲಕನನ್ನು ಪೋಲೀಸರು ವಿನಾಕಾರಣ ಬಂಧಿಸಿ ಪೋಲೀಸ್ ಠಾಣೆಯಲ್ಲಿ ಹೊಡೆದುದನ್ನು ಪ್ರತಿಭಟಿಸಿ ಸ್ಥಳೀಯ ಪೋಲೀಸ್ ಠಾಣೆಯ ಎದುರು ದಲಿತ ಸಂಘರ್ಷ ಸಮಿತಿಯ ದಕ್ಷಿಣ ಕನ್ನಡ ಜಿಲ್ಲಾ ಶಾಖೆ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸ್ಥಳೀಯ ಶಾಖೆ ಸೆ. 24ರಂದು ಧರಣಿ ಸತ್ಯಾಗ್ರಹ ನಡೆಸಿದವು.

ಹರಿಜನ ಬಾಲಕನ ವಿರುದ್ಧ ಪಕ್ಕದ ಮನೆಯ ಸೋಂಪಗೌಡರು ದುರುದ್ದೇಶಪೂರಿತ ದೂರೊಂದನ್ನು ಪೋಲೀಸರಿಗೆ ಸಲ್ಲಿಸಿದ್ದರಿಂದ ಪೋಲೀಸರು ಬಾಲಕನಿಗೆ ಸಿಕ್ಕಾಪಟ್ಟೆ ಹೊಡೆದರೆಂದು ದಲಿತ ಸಂಘರ್ಷ ಸಮಿತಿ ಹೊರಡಿಸಿರುವ ಕರಪತ್ರದಲ್ಲಿ ತಿಳಿಸಲಾಗಿದೆ.

14ರ ಎಳೆಪ್ರಾಯದ ಬಾಲಕನ ಮೇಲೆ ಸುಳ್ಳು ಕೇಸೊಂದನ್ನು ಪೋಲೀಸರು ದಾಖಲುಮಾಡಿರುವುದು ಮತ್ತು ಬಾಲಕ ಸುಂದರನನ್ನು ಇನ್ನೂ ಲಾಕಪ್ಪಿನಲ್ಲಿ ಇಟ್ಟುಕೊಂಡಿರುವುದನ್ನು ಪ್ರತಿಭಟಿಸಿ ಧರಣಿ ಸತ್ಯಾಗ್ರಹ ನಡೆಯಿತು.

ಬಾಲಕನನ್ನು ಬೇಷರತ್ತಾಗಿ ಬಿಡುಗಡೆ ಮಾಡಬೇಕು ಮತ್ತು ಆತನ ಮೇಲಿರುವ ಸುಳ್ಳು ಕೇಸನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಸತ್ಯಾಗ್ರಹಿಗಳು ಒತ್ತಾಯಿಸಿದರು. ತಪ್ಪಿತಸ್ಥ ಪೋಲೀಸರ ಮೇಲೆ ಉನ್ನತ ಅಧಿಕಾರಿಗಳು ಕ್ರಮತೆಗೆದುಕೊಳ್ಳಬೇಕೆಂದು ಸಹ ಒತ್ತಾಯಿಸಲಾಯಿತು. ○

ಜರ್ಮನ್ ಗಣರಾಜ್ಯಕ್ಕೆ ಸಿ ಪಿ ಐ (ಎಂ) ಶುಭಾಶಯ

ಅಕ್ಟೋಬರ್ 7 ರಂದು ಮುವತ್ತನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವ ಜರ್ಮನ್ ಗಣರಾಜ್ಯಕ್ಕೆ, ಪೂರ್ವ ಜರ್ಮನಿಯ ಜನತೆಗೆ ಮತ್ತು ಜರ್ಮನ್ ಸೋಷಿಯಲಿಸ್ಟ್ ವರ್ಕರ್ಸ್ ಯುನಿಟಿ ಪಾರ್ಟಿಗೆ ಭಾರತದಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ತನ್ನ ಶುಭಾಶಯವನ್ನು ಕೋರುತ್ತದೆ.

ಸಮಾಜವಾದಿ ಸಮಾಜ ನಿರ್ಮಾಣದಲ್ಲಿ ಅತ್ಯಂತ ಯಶಸ್ವಿ ಹೆಜ್ಜೆಗಳನ್ನು ಇಡುತ್ತಿರುವ ಜಿ. ಡಿ. ಆರ್. ರಾಷ್ಟ್ರದ ಬಗ್ಗೆ ನಮಗೆ ಅಪಾರ ಹೆಮ್ಮೆ ಇದೆ.

ಭಾರತ ಮತ್ತು ಜಿ. ಡಿ. ಆರ್. ರಾಷ್ಟ್ರಗಳ ನಡುವಣ ಸ್ನೇಹವು ಅತ್ಯಂತ ಗಾಢವಾಗಿರುವುದರ ಬಗ್ಗೆ ಮತ್ತು ಬೆಳೆಯುತ್ತಿರುವುದಕ್ಕೆ ಸಿ. ಪಿ. ಐ. (ಎಂ)ಗೆ ತುಂಬಾ ಸಂತೋಷದ ವಿಚಾರ.

ಮುಂಬರುವ ವರ್ಷಗಳಲ್ಲಿ ಜಿ. ಡಿ. ಆರ್. ಜನತೆಗೆ ಒಳ್ಳೆಯದಾಗಲಿ ಎಂದು ಸಿ. ಪಿ. ಐ. (ಎಂ) ಹಾರೈಸುತ್ತದೆ. ○

ಕೆ. ಜಿ. ಎಫ್. ನಲ್ಲಿ ಕಾರ್ಮಿಕರ ಸಾಂಕೇತಿಕ ಮುಷ್ಕರ

ಸಾರ್ವಜನಿಕ ಉದ್ಯಮಗಳ ನೌಕರರ ಸಮನ್ವಯ ಸಮಿತಿಯು ಕೊಟ್ಟ ಕರೆಯ ಮೇರೆಗೆ ಕೆ. ಜಿ. ಎಫ್. ಚಿನ್ನದ ಗಣಿ ಕಾರ್ಮಿಕರು ಸೆ. 14 ರಂದು ಒಂದು ದಿವಸದ ಸಾಂಕೇತಿಕ ಮುಷ್ಕರವನ್ನು ಯಶಸ್ವಿಯಿಂದ ಆಚರಿಸಿದರೆಂದು ತಡವಾಗಿ ಬಂದ ವರದಿ ತಿಳಿಸಿದೆ.

ಸೆ. 13 ರಂದು ರಾಬರ್ಟ್‌ಸನ್ ಪೇಟೆಯಲ್ಲಿಬಹಿರಂಗಸಭೆಯೊಂದುಜರುಗಿತೆಂದೂ ಕಾರ್ಮಿಕರನ್ನು ಉದ್ದೇಶಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೋಲಾರ ಜಿಲ್ಲೆಯ ಕಾರ್ಯದರ್ಶಿ ಕಾಂ. ಶೌರಿದಾಸ್, ಕಾರ್ಮಿಕ ನಾಯಕ ಕಾಂ. ಟಿ. ಎಸ್. ಮಣಿ, ಎ. ಕಣ್ಣನ್, ಅಶ್ವತ್ ನಾರಾಯಣ್ ಅವರು ಮಾತನಾಡಿ ಕಾರ್ಮಿಕ ವರ್ಗದ ಐಕ್ಯತೆಯ ಮಹತ್ವವನ್ನು ವಿವರಿಸಿದರು.

ಅಂದು ಕಾರ್ಮಿಕರು ಏರ್ಪಡಿಸಿದ್ದ ಬೃಹತ್ ರ್‍ಯಾಲಿಯೊಂದು ಸಹ ಜರುಗಿತೆಂದು ವರದಿ ಹೇಳಿದೆ. ●

ಮೈಕೋ ಕಾರ್ಮಿಕರಿಗೆ ಮೆಟಲ್ ಲ್ಯಾಂಪ್ ಕ್ಯಾಪ್ಸ್ ಕಾರ್ಮಿಕರ ಬೆಂಬಲ

ತಮ್ಮ ನ್ಯಾಯಬದ್ಧ ಬೇಡಿಕೆಗಳ ಈಡೇರಿಕೆಗಾಗಿ ಮುಷ್ಕರ ಹೂಡಿರುವ ಮೈಕೋ ಕಾರ್ಮಿಕರಿಗೆ ಮೆಟಲ್ ಲ್ಯಾಂಪ್ ಕ್ಯಾಪ್ಸ್ ಎಂಪ್ಲಾಯೀಸ್ ಯೂನಿಯನ್ ತನ್ನ ಪೂರ್ಣ ಬೆಂಬಲ ವ್ಯಕ್ತಪಡಿಸಿದೆ.

ಮೈಕೋ ಆಡಳಿತವು ಕಾರ್ಮಿಕರ ಬಗ್ಗೆ ದರ್ಪದಿಂದ ನಡೆದುಕೊಳ್ಳುತ್ತಿದೆ ಎಂದುಆಪಾದಿಸಿರುವ ಸಂಘದ ಪತ್ರಿಕಾ ಪ್ರಕಟಣೆಯು ಸರ್ಕಾರ ಮಧ್ಯ ಪ್ರವೇಶಿಸಿ ಮೈಕೋ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುವಂತೆ ಆಡಳಿತ ವರ್ಗದ ಮೇಲೆ ಒತ್ತಾಯ ತರಬೇಕೆಂದು ಹೇಳಿದೆ.

●

ಚಂದಾ ವಿವರ

ಬಿಡಿಪ್ರತಿ	40 ಪೈಸೆ
6 ತಿಂಗಳಿಗೆ	10 ರೂ.
ಒಂದು ವರ್ಷಕ್ಕೆ	20 ರೂ.

ಸಂಪಾದಕೀಯ

[ಒಂದನೇ ಪುಟದಿಂದ]

ರದ್ದುಗೊಳಿಸಬೇಕೆಂದೂ ದೇವರಸ್ ಹೇಳಿದ್ದಾರೆ. ಅವರು ಇದನ್ನು ಹೇಳಿರುವುದರಲ್ಲಿ ಆಶ್ಚರ್ಯವೇನಿಲ್ಲ. ಏಕೆಂದರೆ ತುರ್ತುಪರಿಸ್ಥಿತಿಯ ಕಾಲದಲ್ಲಿ ದೇವರಸ್‌ರವರು ಜೈಲಿನಿಂದ ತಮ್ಮ ತಪ್ಪನ್ನೆಲ್ಲಾ ಕ್ಷಮಿಸಬೇಕೆಂದು ಇಂದಿರಾರವರಿಗೆ ಪತ್ರ ಬರೆದಿರುವರು. ಇಂಥವರ ಸಹಾಯದಿಂದ ಇಂದಿರಾ ಸರ್ವಾಧಿಕಾರವನ್ನೆದುರಿಸುತ್ತೇವೆಂದು ಜಗಜೀವನ ರಾಂ, ಚಂದ್ರಶೇಖರ್ ಮುಂತಾದವರು ಹೇಳುತ್ತಿರುವುದು ಸೋಜಿಗವೆನಿಸುತ್ತದೆ.

ಆರ್.ಎಸ್.ಎಸ್. ಮತ್ತು ಜನಸಂಘಗಳು ಬೇರೆ ಬೇರೆ ಏನಲ್ಲ. ಹಿಂದೆ ಅವರು ಸರ್ವಾಧಿಕಾರದ ವಿರುದ್ಧ ಹೋರಾಡಿದ ಬಂಡವಾಳ ಈಗ ಕರಗಿ ಹೋಗಿದೆ. ಅವರ ನೇತೃತ್ವದಲ್ಲಿ ನಡೆಸುತ್ತಿರುವ ರಾಜ್ಯ ಸರಕಾರಗಳು ಸರ್ವಾಧಿಕಾರಿ ಪ್ರವೃತ್ತಿಗಳನ್ನು ತೋರಿಸುತ್ತಿವೆ. ಸರ್ವಾಧಿಕಾರದೊಂದಿಗೆ ಕಟ್ಟ ಜಾತೀಯತೆಯೂ ಸೇರಿದೆ.

ಆರ್.ಎಸ್.ಎಸ್.-ಜನಸಂಘದವರು ಮೊದಲು ಮೊರಾರ್ಜಿದೇಸಾಯಿಯವರಿಗೆ ಬೆಂಬಲಕೊಟ್ಟು ಅವರನ್ನು ತಮ್ಮ ಕೈಗೊಂಬೆಯನ್ನಾಗಿ ಮಾಡಿಕೊಂಡರು. ನಂತರ ಅವರನ್ನು ಕೈಬಿಟ್ಟು ಚಂದ್ರಶೇಖರ್‌ರವರನ್ನು ಜನತಾ ಪಾರ್ಲಿಮೆಂಟರಿ ಪಕ್ಷದ ನಾಯಕರನ್ನಾಗಿ ಮಾಡುವ ಸಂಚು ನಡೆಸಿದರು. ಅದು ವಿಫಲಗೊಂಡಾಗ ಜಗಜೀವನ ರಾಂರವರ ಹಿಂಬಾಲಕರಾದರು. ಇದರಲ್ಲೆಲ್ಲಾ ಹೇಗಾದರೂ ಮಾಡಿ ಕೇಂದ್ರದಲ್ಲಿ ಅಧಿಕಾರ ಹಿಡಿಯಬೇಕೆಂಬುದೊಂದೇ ಅವರ ಗುರಿಯಾಗಿತ್ತು.

ಆರ್.ಎಸ್.ಎಸ್.-ಜನಸಂಘವೆಂಬುದು ಬರೀ ಜಾತೀಯ ಶಕ್ತಿಮಾತ್ರವಲ್ಲ. ಇದು ಅಲ್ಪಸಂಖ್ಯಾತರಿಗೆ ಅಪಾಯಕಾರಿಯಾಗಿದೆ. ಹಿಂದೂ ರಾಷ್ಟ್ರವೆಂಬುದನ್ನು ಬೋಧಿಸುತ್ತಾ ತಮ್ಮ ರಾಜಕೀಯ ಧ್ಯೇಯಸಾಧನೆಗೆ ಜಾತೀಯ ಗಲಭೆಗಳನ್ನು ಪ್ರಚೋದಿಸಿ, ಪ್ರಜಾಸತ್ತಾತ್ಮಕ ಮತ್ತು ಸಾಮೂಹಿಕ ಸಂಘಟನೆಗಳನ್ನು ಅವರು ಒಡೆಯುತ್ತಾರೆ. ಭಾಷಾವಾರು ಪ್ರಾಂತಗಳನ್ನು ಅವರು ವಿರೋಧಿಸುತ್ತಾರೆ. ಪ್ರಾಂತಗಳಿಗೆ ಹೆಚ್ಚಿನ ಅಧಿಕಾರ ಕೊಡಬೇಕೆನ್ನುವುದಕ್ಕೆ ಅವರ ವಿರೋಧವಿದೆ. ಬಲಿಷ್ಠ ಕೇಂದ್ರ ಸರ್ಕಾರವಿರಬೇಕೆಂದು ಅವರ ವಾದ. ಹಿಂದಿಯೇ ಅಧಿಕೃತ ಭಾಷೆಯಾಗಿರಬೇಕೆಂದು ಹೇಳುತ್ತದೆ. ಇತರ ಭಾಷೆಗಳಿಗೆ ಸಮಾನತೆ ಕೊಡುವುದನ್ನು ವಿರೋಧಿಸುತ್ತದೆ. ಆರ್.ಎಸ್.ಎಸ್.-ಜನಸಂಘವು ಮೂಲಭೂತವಾಗಿ ಕಮ್ಯುನಿಸ್ಟ್ ವಿರೋಧಿಯಾಗಿದೆ ಮತ್ತು ಬೃಹತ್ ಕೈಗಾರಿಕಾ ಗುತ್ತೇದಾರಿಗಳ ರಾಷ್ಟ್ರೀಕರಣಕ್ಕೆ ತೆಗೆದುಕೊಳ್ಳುವ ಕ್ರಮಗಳನ್ನು ವಿರೋಧಿಸುತ್ತದೆ. ಜೀವನಾವಶ್ಯಕ ವಸ್ತುಗಳ ಬಗ್ಗೆ ಬೆಲೆ ನಿಯಂತ್ರಣ ಮತ್ತಿತರ ಕ್ರಮಗಳನ್ನು ತೀವ್ರ ವಿರೋಧಿಸುತ್ತಾ ಸಗಟು ವ್ಯಾಪಾರಸ್ಥರ ಹಿತ ರಕ್ಷಿಸಲು "ಮುಕ್ತ ವ್ಯಾಪಾರ"ಕ್ಕೆ ಬೆಂಬಲ ನೀಡುತ್ತದೆ. ಪಾಳೆಯಗಾರಿ ಭೂಮಾಲೀಕರ ಮತ್ತು ಹಳೆಯ ರಾಜಮಹಾರಾಜರುಗಳೊಡನೆ ಅದರ ನಿಕಟ ಸಂಬಂಧವಿರುವುದರ ಬಗ್ಗೆ ಹೆಚ್ಚೇನೂ ಹೇಳಬೇಕಾಗಿಲ್ಲ. ಮೊರಾರ್ಜಿದೇಸಾಯಿ, ಚಂದ್ರಶೇಖರ್, ಜಗಜೀವನರಾಂ, ದಂಡವತೆ, ಗೋರೆ ಮುಂತಾದವರು ಮೊದಲಿನಿಂದಲೂ ಆರ್. ಎಸ್. ಎಸ್. - ಜನಸಂಘದ ಜಾತೀಯವಾದ ಸಿದ್ಧಾಂತ ಮತ್ತು ರಾಜಕೀಯವನ್ನು ವಿರೋಧಿಸಿದವರಾಗಿದ್ದು ಈಗ ಅದಕ್ಕೆ ರಕ್ಷಣೆ ನೀಡುವುದು ಶೋಚನೀಯವಾಗಿದೆ. ಈ ನಾಯಕರು ಇಂದಿರಾರವರು ಪ್ರತಿನಿಧಿಸುವ ಸರ್ವಾಧಿಕಾರವನ್ನೂ, ಕೋಮುವಾದಿ ಆರ್. ಎಸ್.ಎಸ್.-ಜನಸಂಘವನ್ನೂ ಎದುರಿಸಲು ಈ ಆರ್. ಎಸ್. ಎಸ್.-ಜನಸಂಘದೊಡನೆ ಅವರಿಗಿರುವ ಸಂಬಂಧವನ್ನು ತೊಡೆದುಹಾಕುವರೆಂದು ರಾಷ್ಟ್ರದ ಎಡ, ಪ್ರಜಾಸತ್ತಾತ್ಮಕ, ಜಾತ್ಯಾತೀತ ಮತ್ತು ಪುರೋಗಾಮಿ ಶಕ್ತಿಗಳು ಅತ್ಯಂತ ಕಳಕಳಿಯಿಂದ ಹಾರೈಸುತ್ತವೆ. ●

ಪೊಲಿಟ್‌ಬ್ಯೂರೋ ಕರೆ

[ಒಂದನೇ ಪುಟದಿಂದ]

ಕಮ್ಯುನಿಸ್ಟ್ ಪಕ್ಷವು ಇತರ ಎಡಪಕ್ಷಗಳು, ಲೋಕದಳ ಹಾಗೂ ಕಾಂಗ್ರೆಸ್‌ನೊಂದಿಗೆ ಸಮಸ್ಯೆಯನ್ನು ಚರ್ಚಿಸಿ ರಾಜ್ಯದಲ್ಲಿ ಮೂರನೇ ರಂಗವನ್ನು ಕಟ್ಟಲು ಪ್ರಯತ್ನಿಸುವುದು.

ಕೇರಳದಲ್ಲಿ ಆಳುವರಂಗದ ಪಕ್ಷಗಳು ವಿಧಾನಸಭೆಯನ್ನು ವಿಸರ್ಜಿಸಿ, ಲೋಕಸಭಾ ಚುನಾವಣೆಯೊಂದಿಗೆ ರಾಜ್ಯ ವಿಧಾನ ಸಭೆಗೂ ಚುನಾವಣೆಗಳನ್ನು ನಡೆಸಲು ಒಪ್ಪಿರುವುದು ಒಂದು ದಾಖಲೆಯಾಗಿದೆ. ಆದರೆ, ಎಲ್ಲವೂ ಸರಿಯಾಗಿಲ್ಲ, ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಮೈತ್ರಿಗೆ ಉದ್ದೇಶಿತ "ಕೇರಳ ಭೂ ಸುಧಾರಣಾ(ತಿದ್ದುಪಡಿ) ಮಸೂದೆ 1979" ದೊಡ್ಡ ಅಡ್ಡಿಯಾಗಿದೆ. ಗೇಣಿದಾರರ ಹಿತಕ್ಕೆ ವಿರೋಧವಾಗಿರುವ ಈ ಮಸೂದೆ ಜಾರಿಗೆ ಬಂದಲ್ಲಿ ಸಹಸ್ರಾರು ಗೇಣಿದಾರರು ಹಾಗೂ ಕೃಷಿ ಕೂಲಿಗಾರರು ಅದರಲ್ಲೂ ಅಲ್ಪಸಂಖ್ಯಾತ ಜಾತಿಗೆ ಸೇರಿದ ಸಾವಿರಾರು ಜನರು ತಮ್ಮ ವಶದಲ್ಲಿರುವ ಭೂಮಿಯನ್ನು ಕಳೆದುಕೊಳ್ಳಬೇಕಾಗುತ್ತದೆ. ಉದ್ದೇಶಿತ ಮಸೂದೆ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳ ಮೂಲಭೂತ ನೀತಿ, ತತ್ವಗಳನ್ನು ಭಂಗಗೊಳಿಸುವುದರಿಂದ ಎಲ್ಲರೂ ಇದರ ಬಗ್ಗೆ ಪುನರಾಲೋಚಿಸಿ, ಐಕ್ಯತಾ ವೇದಿಕೆಯನ್ನು ರಚಿಸಲು ಸಹಾಯ ಮಾಡುವರೆಂದು ಪೊಲಿಟ್ ಬ್ಯೂರೋ ಆಶಿಸಿದೆ.

ದೇಶದ ವಿವಿಧ ರಾಜ್ಯಗಳಲ್ಲಿ ಪರಿಸ್ಥಿತಿ ಭಿನ್ನವಾಗಿದೆ ಎಂಬುದನ್ನು ಪೊಲಿಟ್‌ಬ್ಯೂರೋ ಗಮನಿಸಿದೆ. ಆದರೂ, ಸರ್ವಾಧಿಕಾರಿ ಶಕ್ತಿಗಳು ಹಾಗೂ ಜಾತೀಯವಾದಿ ಶಕ್ತಿಗಳನ್ನು ಸೋಲಿಸಲು, ಎಲ್ಲಾ ಎಡ, ಪ್ರಜಾಸತ್ತಾತ್ಮಕ ಹಾಗೂ ಜಾತ್ಯಾತೀತ ಶಕ್ತಿಗಳ ಐಕ್ಯತೆಗೆ ಪ್ರತಿಯೊಬ್ಬರೂ ಶಕ್ತಿಮೀರಿ ಶ್ರಮಿಸುವುದು. ಅದಕ್ಕಾಗಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದು ಎಲ್ಲರ ಕರ್ತವ್ಯವಾಗಿದೆ. ○

ಕಂದಾಯ, ಲೆವಿ ಮಾಫಿಗೆ ಉಡುಪಿ ರೈತರ ಪ್ರದರ್ಶನ

ಬರಗಾಲ ಪೀಡಿತ ಪ್ರದೇಶಗಳ ಮತ್ತು ಹಿಂದೆ ನೆರೆ ಹಾವಳಿಯಲ್ಲಿ ನೊಂದ ರೈತರ ಮೇಲಿನ ಕಂದಾಯ ಮತ್ತು ಲೆವಿಯನ್ನು ಸರ್ಕಾರವು ವಜಾ ಮಾಡಬೇಕೆಂದು ಒತ್ತಾಯಿಸಿ ಉಡುಪಿ ತಾಲ್ಲೂಕು ರೈತಸಂಘವು ಅಕ್ಟೋಬರ್ 4 ರಂದು ಉಡುಪಿಯಲ್ಲಿ ಪ್ರದರ್ಶನ ನಡೆಸಿತು.

ಉಳುವ ರೈತರಿಂದ ಯಾವರೀತಿಯ ಪರಿಹಾರವನ್ನೂ ತೆಗೆದುಕೊಳ್ಳದೆ ಅವರಿಗೆ ಭೂಮಿಯನ್ನು ಮುಫತ್ತಾಗಿ ಕೊಡಬೇಕು, ಸಣ್ಣ ಪ್ರಮಾಣದ ಭೂ ಒಡೆಯರಿಗೆ ಏಕ ಗಂಟಿನಲ್ಲಿ ಸರ್ಕಾರದಿಂದ ಪರಿಹಾರಕೊಡಬೇಕು, ಭೂ ನ್ಯಾಯ ಮಂಡಳಿಗಳಲ್ಲಿ ಆಗಿರುವ ಅನ್ಯಾಯಗಳನ್ನು ಸರಿಪಡಿಸಬೇಕು, ಆಳುವ ಪಕ್ಷದ ಸದಸ್ಯರೇ ತುಂಬಿ ಹೋಗಿರುವ ಭೂ ನ್ಯಾಯ ಮಂಡಳಿಗಳಿಗೆ ರೈತಸಂಘದ ಸದಸ್ಯರನ್ನು ಹಾಕಿ ರೈತರಿಗೆ ಮಂಡಳಿಗಳಲ್ಲಿ ಪ್ರಾತಿನಿಧ್ಯ ಕೊಡಬೇಕು, ಹೆಚ್ಚುವರಿ ಭೂಮಿ ಮತ್ತು ಸರ್ಕಾರಿ ಬಂಜರು ಭೂಮಿಯನ್ನು ಭೂಹೀನರಿಗೆ ಹಂಚಬೇಕು, ಕೃಷಿಕೂಲಿಗಾರರಿಗೆ ಕನಿಷ್ಟ ಕೂಲಿಯನ್ನು ಜಾರಿಗೊಳಿಸಬೇಕು, ಕೃಷಿಕನ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಸಿಕ್ಕುವ ವ್ಯವಸ್ಥೆ ಮಾಡಬೇಕು, ರೈತರ ಎಲ್ಲ ಸಾಲಗಳನ್ನು ರದ್ದುಮಾಡಬೇಕು ಎಂಬ ಬೇಡಿಕೆಗಳ ಮನವಿ ಪತ್ರವೊಂದನ್ನು ತಾಲ್ಲೂಕು ತಹಸೀಲ್ದಾರ್ ಅವರಿಗೆ ಅರ್ಪಿಸಲಾಯಿತು. ತಹಸೀಲ್ದಾರ್ ಗೈರು ಹಾಜರಾಗಿದ್ದರಿಂದ ಮುಖ್ಯ ಅಧಿಕಾರಿಗಳು ಮನವಿ ಸ್ವೀಕರಿಸಿದರು.

ಉಡುಪಿಯ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿದ ರೈತಸಂಘದ ಸದಸ್ಯರು ರೈತ-ಕೂಲಿಗಾರರ ಪರ ಘೋಷಣೆಗಳನ್ನು ಕೂಗಿದರು. ಸಂಜೆ ಸಾರ್ವಜನಿಕ ಸಭೆ ಜರುಗಿತು. ○

ಜೆ. ಪಿ. ಗೆ ಶ್ರದ್ಧಾಂಜಲಿ

ಧೀಮಂತ ಸ್ವಾತಂತ್ರ್ಯ ಹೋರಾಟಗಾರ, ರಾಷ್ಟ್ರಪ್ರೇಮಿ, ಪ್ರಜಾಪ್ರಭುತ್ವವಾದಿ ಹಾಗೂ ಸಮಾಜವಾದಿ ಜಯಪ್ರಕಾಶನಾರಾಯಣ್‌ರವರು ಗತಿಸಿಹೋದರು. ದೇಶದ ರಾಜಕೀಯ ಪರಿಸ್ಥಿತಿ ಅತ್ಯಂತ ಕ್ಲಿಷ್ಟವಾಗಿರುವ ಸಮಯದಲ್ಲಿ ನಮ್ಮ ಮಧ್ಯೆ ಜೆ. ಪಿ. ಯವರು ಇಲ್ಲವಾಗಿರುವುದು ಅತ್ಯಂತ ದುರದೃಷ್ಟಕರವೆಂದು ಭಾರತ ಕಮ್ಯುನಿಸ್ಟ್ ಪಕ್ಷದ (ಮಾರ್ಕ್ಸ್‌ವಾದಿ) ಪೊಲಿಟ್‌ಬ್ಯೂರೋ ತನ್ನ ಶೋಕವನ್ನು ವ್ಯಕ್ತಪಡಿಸಿದೆ.

ತುರ್ತುಪರಿಸ್ಥಿತಿ ಮತ್ತು ಸರ್ವಾಧಿಕಾರದ ವಿರುದ್ಧ, ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ಉಳುವಿಗಾಗಿ ಜಯಪ್ರಕಾಶ್‌ನಾರಾಯಣರು ವಹಿಸಿದ ಭೂಮಿಕೆ ಜನಗಳ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯುತ್ತದೆ. ಏಕ ವ್ಯಕ್ತಿಯ ಸರ್ವಾಧಿಕಾರದ ವಿರುದ್ಧ ದೊಡ್ಡ ಪ್ರಮಾಣದಲ್ಲಿ ಸಮರಸಾರಿ ಜನತೆಯ ಅತಿದೊಡ್ಡ ಆಂದೋಲನವನ್ನು ಮುನ್ನಡೆಸುವಲ್ಲಿ ಜೆ. ಪಿ. ಯವರು ಯಶಸ್ವಿಯಾದರು, ಇದಕ್ಕಾಗಿ ಜೈಲುವಾಸ ಅನುಭವಿಸಿದರು. ಇಂದಿರಾಗಾಂಧಿಯವರು ತಾವು ನಡೆಸಿದ ಈ ಹೀನಕೃತ್ಯಕ್ಕಾಗಿ ಏನೂ ಮಾಡಿದರೂ ಕಳಂಕದ ಪಟ್ಟಿಯನ್ನು ಕಳೆದುಕೊಳ್ಳಲಾರರು.

ಸರ್ವಾಧಿಕಾರದ ಅಪಾಯದ ವಿರುದ್ಧ, ಪ್ರಜಾತಾಂತ್ರಿಕ ಮೌಲ್ಯಗಳ ಉಳುವಿಗಾಗಿ ಜಯಪ್ರಕಾಶರು ಕಟ್ಟಿದ ಜನತಾಪಕ್ಷ ಅವರ ಕಣ್ಣು ಮುಂದೆಯೇ ಛಿದ್ರವಾದದ್ದು ಒಂದು ದುರಂತ. ಆದರೆ ಜೆ. ಪಿ. ಯವರು ಏಕವ್ಯಕ್ತಿಯ ಸರ್ವಾಧಿಕಾರದ ವಿರುದ್ಧ ನಡೆಸಿದ ಹೋರಾಟದ ಫಲ ನಮ್ಮ ಮುಂದಿದೆ.

ಅಗಲಿದ ನಾಯಕನಿಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್ ಬ್ಯೂರೋ ಗೌರವಪೂರ್ವಕ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ ಹಾಗೂ ಅವರ ಕುಟುಂಬಕ್ಕೆ ಸಂತಾಪಸೂಚಕ ಸಂದೇಶವನ್ನು ಕಳಿಸಿದೆ.

ಪರಿಸರ

ರಾಜ್ಯಾದ್ಯಂತ ಭೂಪಂಚಾಯಿತಿಗಳ ಮುಂದೆ ಇನ್ನೂ 3ಲಕ್ಷ ಅರ್ಜಿಗಳು ಬಾಕಿ ಉಳಿದಿವೆ. ಭೂ ಸುಧಾರಣೆಯ ಜಾರಿಯಿಂದ ನಮಗೆ ನಿಜಕ್ಕೂ ತೃಪ್ತಿಯಾಗಿದೆ.

ನಾನು ಸಹಿ ಮಾಡದಿದ್ದರೂ ಸರ್ಕಾರದಿಂದ 100 ಎಕರೆಗಳಷ್ಟು ಸರ್ಕಾರಿ ಭೂಮಿಯನ್ನು ಚಿಕ್ಕಮಗಳೂರಿನ ಜಮೀನ್ದಾರರೊಬ್ಬರು ಪಡೆದರು.

—ಬಿ. ಬಸವಲಿಂಗಪ್ಪ
(ಕರ್ನಾಟಕ ರಾಜ್ಯ ಕಂದಾಯ ಸಚಿವ)

ಇಂದು ಚೀನಾ ದೇಶದಲ್ಲಿ ಹಸಿವು, ಬಡತನ, ನಿರುದ್ಯೋಗ, ವೇಶ್ಯಾವೃತ್ತಿ ಮತ್ತು ಬೆಲೆಏರಿಕೆಯಂತಹ ಯಾವ ಸಮಸ್ಯೆಗಳೂ ಇಲ್ಲ. ನಾನು ಮತ್ತು ನನ್ನ ಪತ್ನಿ ಕುಸುಮ ಚೀನದ ಅನೇಕ ನಗರಗಳು ಮತ್ತು ಹಳ್ಳಿಗಳನ್ನು ನೋಡಿದೆವು. 21 ದಿವಸಗಳ ನಮ್ಮ ಪ್ರವಾಸ ಕಾಲದಲ್ಲಿ ಒಬ್ಬ ಭಿಕ್ಷುಕ ಕೂಡ ನಮಗೆ ನೋಡಲು ಸಿಕ್ಕಲಿಲ್ಲ.

'ಸಮಗ್ರತಾ' ಹಿಂದಿ ನಿಯತಕಾಲಿಕೆಯಲ್ಲಿ ಖ್ಯಾತ ಬರಹಗಾರ ವಸಂತ ನಾರಗೋಳಕರ

ಜನಸಮೂಹವನ್ನು ಪರಿಣಾಮಕಾರಿಯಾಗಿ ತಲುಪುವಲ್ಲಿ ಪತ್ರಿಕೆ ಮತ್ತು ಚಲನಚಿತ್ರಗಳಂತಹ ಸಮೂಹ ಮಾಧ್ಯಮಗಳು ವಿಫಲವಾಗಿರುವಾಗ ನಾಟಕ, ಹಾಡುಗಳು ಮುಂತಾದ ಸಮೂಹ ಮಾಧ್ಯಮಗಳ ಕಡೆ ತಿರುಗಬೇಕಾಗಿದೆ.

—ಪ್ರಸನ್ನ
(ಖ್ಯಾತ ನಾಟಕ ನಿರ್ದೇಶಕ)

ಬೆಂಗಳೂರು ನಗರದ ದಂಡು ಪ್ರದೇಶದ ಚಿತ್ರಮಂದಿರವೊಂದರಲ್ಲಿ 'ಟಿಕೆಟ್ ಕೊಡಿ' ಎಂದು ಕನ್ನಡದಲ್ಲಿ ಕೇಳಿದ ಯುವಕನೊಬ್ಬನಿಗೆ ಟಿಕೆಟ್ ನಿರಾಕರಿಸಲಾಯಿತು.

—ಡಾ. ಎಂ. ಚಿದಾನಂದ ಮೂರ್ತಿ
(ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪ್ರೊಫೆಸರ್)
(ಪ. ಬಂಗಾಳ ವಿಧಾನ ಸಭೆಯಲ್ಲಿ ಸಿ. ಪಿ. ಐ. (ಎಂ.) ಸದಸ್ಯ)

ಅನೇಕ ರಾಜ್ಯಗಳ ಮುಖ್ಯಮಂತ್ರಿಗಳ ವಿರೋಧವು ಸ್ಥಾನಬದ್ಧತೆ ಕಾಯಿದೆಗೆ ಇದ್ದರೂ ಅದನ್ನು ನಮ್ಮ ಮೇಲೆ ಹೇರಲಾಗಿದೆ. ಪಶ್ಚಿಮ ಬಂಗಾಳದಲ್ಲಿ ಅದನ್ನು ನಾವು ಉಪಯೋಗಿಸುವುದಿಲ್ಲ.

—ಜ್ಯೋತಿಬಸು

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT